ಪರಿವಿಡಿ

ಸಂಕ್ಷೇಪಣಗಳು.. 3

1. ಪರಿಚಯ... 4

2. ಫ್ಯಾಕ್ಟರಿಯ ಸಂಕ್ಷಿಪ್ತ ವಿವರ 4

3. ಸಂಶೋಧನೆಗೆ ಅಳವಡಿಸಿಕೊಂಡ ವಿಧಾನ 5

4. ಸ್ವೀಕರಿಸಿದ ಆರೋಪಗಳ ಮೇಲಿನ ತನಿಖಾ ವರದಿ.. 6

4.1. ಕೆಲಸದ ವ್ಯವಸ್ಥೆ 6

4.2 ವೇತನಗಳು ಮತ್ತು ಬೆನಿಫಿಟ್ಸ್‌ಗಳು 9

4.3 ಕೆಲಸದ ಗಂಟೆಗಳು 11

4.4 ಕಾರ್ಯನಿರತ ಕೆಲಸದ ಗಂಟೆಗಳು 13

4.5 ಗ್ರಿವೆನ್ಸ್ ರಿಡ್ರೆಸ್ಸಲ್ 14

4.6 ಸಂಘಟನೆಯ ಸ್ವಾತಂತ್ರ್ಯ 17

4.7. ಪ್ರಚೋದನೆ ಮತ್ತು ಕಿರುಕುಳ (ವಲಸೆ ಕೆಲಸಗಾರರೊಂದಿಗೆ) 18

ಅನುಬಂಧ: ವರ್ಕ್ಸ್ ಕಮಿಟಿ ಮತ್ತು ಕುಂದುಕೊರತೆ ಪರಿಹಾರ ಸಮಿತಿಗೆ ಸಂಬಂಧಿಸಿದ ಕಾನೂನು ಉಲ್ಲೇಖಗಳ 20

ಸಂಕ್ಷೇಪಣಗಳು

ಸಂಕ್ಷಿಪ್ತ ರೂಪ	ಪೂರ್ಣ ರೂಪ
ಸಿ ಐ ಟಿ ಯು	ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್
ಇ ಎಸ್ ಐ	ಕಾರ್ಮಿಕರ ರಾಜ್ಯ ವಿಮಾ
ಎಫ್ ಐ ಆರ್	ಪ್ರಥಮ ಮಾಹಿತಿ ವರದಿ
ಎಫ್ ಓ ಎ	ಫ್ರೀಡಂ ಆಫ್ ಅಸೋಸಿಯೇಷನ್
ಜಿ ಐ ಎಫ್ ಡಬ್ಲ್ಯೂ	ಕಾರ್ಮಿಕರಿಂದ ಮಾಹಿತಿ ಕಲೆ ಹಾಕುವುದು
ಎಚ್ ಆರ್	ಮಾನವ ಸಂಪನ್ಮೂಲ
ಐ ಸಿ ಸಿ	ಆಂತರಿಕ ದೂರು ಸಮಿತಿ
ಜೆ ಕೆ ಪಿ ಎಲ್	ಜೀನ್ಸ್ ನಿಟ್ ಪ್ರೈವೇಟ್ ಲಿಮಿಟೆಡ್
ಪಿ ಓ ಎಸ್ ಎಚ್	ಲೈಂಗಿಕ ಕಿರುಕುಳ ನಿಗ್ರಹ
ಟಿ & ಎಲ್	ಟ್ರೈನಿಂಗ್ & ಲರ್ನಿಂಗ್
ವಿ ಎಫ್ ಸಿ	ವಿ ಎಫ್ ಕಾರ್ಪೋರೇಶನ್

1. ಪರಿಚಯ

ಆಸ್ಕ್ (ASK) ತರಬೇತಿ ಮತ್ತು ಕಲಿಕೆ ಪ್ರೈ. ಲಿಮಿಟೆಡ್ ಗೆ (ಇನ್ನು ಮುಂದೆ ಆಸ್ಕ್ ಟಿ &ಎಲ್ ASK T&L) ಬ್ರಾಂಡ್‌ಗಳ ಗುಂಪಿನಿಂದ (ಅಡಿಡಾಸ್, ವಿಎಫ್ ಕಾರ್ಪೊರೇಶನ್ ಮತ್ತು ಜಿ-ಸ್ಟಾರ್) ಸ್ಥಳೀಯ ಟ್ರೇಡ್ ಯೂನಿಯನ್ (CITU[1]) ಬೆಂಗಳೂರು, ಕರ್ನಾಟಕ ದವರು ಉತ್ತರ ಕರ್ನಾಟಕ ಜಿಲ್ಲೆಯಲ್ಲಿರುವ "ಜೀನ್ಸ್ ನಿಟ್ ಪ್ರೈವೇಟ್ ಲಿಮಿಟೆಡ್ (JKPL)" ಕಾರ್ಖಾನೆಗೆ ಸಂಬಂಧಿಸಿದಂತೆ ಸಲ್ಲಿಸಿದ "ಆರೋಪಗಳ" (ಈ ಕೆಳಗೆ ಉಲ್ಲೇಖಿಸಿದಂತೆ) ಕುರಿತಾಗಿ ವಿವರವಾದ, ಸತ್ಯ ಆಧಾರಿತ ಮತ್ತು ಪಕ್ಷಪಾತವಿಲ್ಲದ ತನಿಖೆಗಾಗಿ ಮತ್ತು ಅವುಗಳನ್ನು ಉದ್ದೇಶಿಸುವಂತಹ ಶಿಫಾರಸುಗಳನ್ನು ಒಳಗೊಂಡಂತೆ ಸಮಗ್ರ ವರದಿಯನ್ನು ಸಲ್ಲಿಸಲು ಮನವಿ ಸಲ್ಲಿಸಲಾಯಿತು.

ಮೇಲೆ ತಿಳಿಸಿದ ಕಾರ್ಖಾನೆ ಕುರಿತಾಗಿ ಸ್ಥಳೀಯ ಟ್ರೇಡ್ ಯೂನಿಯನ್ ನಿಂದ ಪ್ರಸ್ತಾಪಿಸಲಾದ ಸಮಸ್ಯೆಗಳು ಮತ್ತು ಕಾಳಜಿಗಳು ಕೆಳಗಿನಂತಿದೆ:

1. **ಕೆಲಸದ ವ್ಯವಸ್ಥೆಗಳು:** ಪ್ರತಿ ಆಪರೇಟರ್‌ಗೆ 5 ಯಂತ್ರಗಳ ಬದಲಿಗೆ 10 ಹೆಣಿಗೆ ಯಂತ್ರಗಳನ್ನು ನಿರ್ವಹಿಸುವಂತೆ ಕೆಲಸಗಾರರನ್ನು ಒತ್ತಾಯಿಸಲಾಯಿತು - ವೇತನದಲ್ಲಿ ಯಾವುದೇ ಹೆಚ್ಚಳವಿಲ್ಲದೆ.
2. **ವೇತನ ಮತ್ತು ಸೌಲಭ್ಯಗಳು :** ಈ ಮೂರು ವರ್ಷಗಳಿಂದ ವೇತನದಲ್ಲಿ ಯಾವುದೇ ಹೆಚ್ಚಳವಿಲ್ಲ.
3. **ಕೆಲಸದ ಸಮಯ:** ಪ್ರತಿ ಭಾನುವಾರವೂ ಸಹ ಕಾರ್ಮಿಕರಿಂದ ಕೆಲಸ ಮಾಡಿಸಲಾಯಿತು.
4. **ಅತಿಯಾದ ಕೆಲಸದ ಗಂಟೆಗಳು:** ಒಂದು ತಿಂಗಳಲ್ಲಿ ಹೆಚ್ಚುವರಿಯಾಗಿ 150 - 200 ಗಂಟೆಗಳ ಓವರ್ ಟೈಮ್ ತಲುಪಿತು.
5. **ಕುಂದುಕೊರತೆ ಪರಿಹಾರ:** ಕುಂದುಕೊರತೆ ಪರಿಹಾರ ಸಮಿತಿ ಇಲ್ಲ
6. **ಸಂಘಗಳ ಸ್ವಾತಂತ್ರ್ಯದ ಸಮಸ್ಯೆಗಳು (FoA)**
7. **ಬೆದರಿಕೆ ಮತ್ತು ಕಿರುಕುಳ:** ಡಿಸೆಂಬರ್ ಆರಂಭದಲ್ಲಿ (2019), ಕಾರ್ಖಾನೆ ಮ್ಯಾನೇಜ್ಮೆಂಟ್ ಕೆಲವು ವಲಸೆ ಕಾರ್ಮಿಕರ ಮನೆಗಳಿಗೆ ನುಗ್ಗಿ ಕೆಲವು ವಸ್ತುಗಳನ್ನು (ಲ್ಯಾಪ್‌ಟಾಪ್‌ಗಳು ಸೇರಿದಂತೆ) ತೆಗೆದಾಕಿದರು.
8. **ಕಾರ್ಮಿಕರ ಟರ್ಮಿನೇಷನ್**

ಮೇಲಿನದನ್ನು ಆಧರಿಸಿ, ಮೇಲೆ ಉಲ್ಲೇಖಿಸಿದ 8 ಕಾಳಜಿಗಳಲ್ಲಿ 7 ರ ವಿವರವಾದ ತನಿಖೆಯನ್ನು ನಡೆಸಲು ಬ್ರಾಂಡ್‌ಗಳ ಗುಂಪಿನಿಂದ ಜಂಟಿ, ಸಹಕಾರಿ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು (ಕಾರ್ಮಿಕ ನ್ಯಾಯಮಂಡಳಿಯ ಮೂಲಕ ಈಗ ಕಾನೂನು ಪ್ರಕ್ರಿಯೆಯಲ್ಲಿರುವ ಕಾರ್ಮಿಕರ ಟರ್ಮಿನೇಷನ್ ಸಮಸ್ಯೆಯನ್ನು ಹೊರತುಪಡಿಸಿ) ಕಾರ್ಖಾನೆ ಭೇಟಿ, ದಾಖಲೆ ಪರಿಶೀಲನೆ, ಕೆಲಸಗಾರರಿಂದ ಮಾಹಿತಿ ಸಂಗ್ರಹಿಸುವುದು (ಆನ್‌ಸೈಟ್ ಮತ್ತು ಆಫ್‌ಸೈಟ್) ಮತ್ತು ಆರೋಪಗಳನ್ನು ಎತ್ತಿದ ಯೂನಿಯನ್ (ಸಿಐಟಿಯು) ಪ್ರತಿನಿಧಿಗಳೊಂದಿಗಿನ ಸಂವಹನ. ASK T&L ತಂಡವು ಜನವರಿ 07 ರಿಂದ 10, 2021 ರವರೆಗೆ ಬೆಂಗಳೂರಿನಲ್ಲಿ ತನಿಖೆ ನಡೆಸಿತು.

[1] ಒಕ್ಕೂಟದ ಸ್ಥಳೀಯ ಹೆಸರು "ಬೆಂಗಳೂರು ಉತ್ತರ ಕೈಗಾರಿಕಾ ಕಾರ್ಮಿಕರ ಸಂಘ", ಇದು "ರಾಷ್ಟ್ರೀಯ ಟ್ರೇಡ್ ಯೂನಿಯನ್ (CITU)" ಗೆ ಸೇರಿಕೊಂಡಿದೆ, ಇದು ಭಾರತದ ರಾಷ್ಟ್ರೀಯ ಮಟ್ಟದ ಟ್ರೇಡ್ ಯೂನಿಯನ್

2. ಫ್ಯಾಕ್ಟರಿಯ ಸಂಕ್ಷಿಪ್ತ ವಿವರ

ಫ್ಯಾಕ್ಟರಿ ಹೆಸರು	**ಜೀನ್ಸ್ ನಿಟ್ ಪ್ರೈವೇಟ್ ಲಿಮಿಟೆಡ್ (JKPL)**
ಪ್ರಾರಂಭವಾದ ವರ್ಷ	2011

<table>
<tr><td>ಒಟ್ಟು ಫ್ಯಾಕ್ಟರಿ ವಿಸ್ತೀರ್ಣ</td><td>11625 sq mts</td></tr>
<tr><td>ಬಿಲ್ಡಿಂಗ್ ಮತ್ತು ಫ್ಲೋರ್ ಗಳ ಸಂಖ್ಯೆ</td><td>2 ಬಿಲ್ಡಿಂಗ್ ಮತ್ತು ಪ್ರತಿಯೊಂದರಲ್ಲಿ 2 ಫ್ಲೂರ್ಗಳು</td></tr>
<tr><td>ತನಿಖಾ ಸಂದರ್ಭದಲ್ಲಿ ಕಾರ್ಯಾಚರಣೆಯ ಗಂಟೆಗಳು (ಒ ಟಿ ಸಮಯ ಬಿಟ್ಟು)</td><td>30 ನಿಮಿಷಗಳ ಬ್ರೇಕ್ ಒಳಗೊಂಡು 9.5 ಗಂಟೆಗಳು</td></tr>
<tr><td>ತನಿಖಾ ಸಂದರ್ಭದಲ್ಲಿ ಶಿಫ್ಟ್ ಗಂಟೆಗಳು ಮತ್ತು ಒಟ್ಟು ಶಿಫ್ಟ್ ಗಳು</td><td>ನಿಟ್ಟಿಂಗ್ ಆಪರೇಟರ್ ಗಳಿಗೆ 2 ಶಿಫ್ಟ್ ಗಳು -7 a.m-4.30 p.m & 7.30 p.m to 5 a.m
ಇತರೆ ಕಾರ್ಮಿಕರಿಗೆ ಕೇವಲ ಬೆಳಗ್ಗಿನ ಶಿಫ್ಟ್ -8 a.m to 5.30 p.m</td></tr>
<tr><td>ಫ್ಯಾಕ್ಟರಿ ಯಲ್ಲಿ ಒಟ್ಟು ಕಾರ್ಮಿಕರು (ತನಿಖಾ ದಿವಸದ ವರೆಗೆ)</td><td>395 (ಪುರುಷರು 154 -, ಮಹಿಳೆಯರು -241)</td></tr>
<tr><td>ನಿಟ್ಟಿಂಗ್ ವಿಭಾಗದಲ್ಲಿ ಒಟ್ಟು ಕಾರ್ಮಿಕರು</td><td>162 (ಪುರುಷರು 123 -, ಮಹಿಳೆಯರು -39)</td></tr>
<tr><td>ಡಿಪಾರ್ಟ್ಮೆಂಟ್ ಹೆಸರು ಮತ್ತು ಒಟ್ಟು ಕಾರ್ಮಿಕರು</td><td>
<table>
<tr><th>ಡಿಪಾರ್ಟ್ಮೆಂಟ್</th><th>ಪುರುಷರು</th><th>ಮಹಿಳೆಯರು</th><th>ಒಟ್ಟು</th></tr>
<tr><td>ನಿಟ್ಟಿಂಗ್</td><td>43</td><td>119</td><td>162</td></tr>
<tr><td>ನಿಟ್ಟಿಂಗ್ ನಂತರ</td><td>103</td><td>81</td><td>184</td></tr>
<tr><td>ಫಿನಿಶಿಂಗ್</td><td>2</td><td>23</td><td>25</td></tr>
<tr><td>ಎಚ್ ಆರ್ & ಆಡಳಿತ</td><td>6</td><td>18</td><td>24</td></tr>
</table>
</td></tr>
<tr><td>ನಿಟ್ಟಿಂಗ್ ವಿಭಾಗದಲ್ಲಿ ಕಾರ್ಮಿಕರ ಬ್ರೇಕ್ ಅಪ್</td><td>
<table>
<tr><th>ಕಾರ್ಮಿಕರ ವಿಧಗಳು</th><th>ಪುರುಷರು</th><th>ಮಹಿಳೆಯರು</th><th>ಒಟ್ಟು</th></tr>
<tr><td>ಆಪರೇಟರ್</td><td>97</td><td>12</td><td>109</td></tr>
<tr><td>ಪ್ರೈಮರಿ</td><td>8</td><td>27</td><td>35</td></tr>
<tr><td>ನಿರ್ವಹಣೆ</td><td>11</td><td>0</td><td>11</td></tr>
<tr><td>ಪ್ರೋಗ್ರಾಮರ್</td><td>7</td><td>0</td><td>7</td></tr>
</table>
</td></tr>
</table>

3. ತನಿಖೆಗಾಗಿ ಅಳವಡಿಸಿಕೊಂಡ ವಿಧಾನಗಳು

ಈ ತನಿಖೆಗೆ ಅಳವಡಿಸಿಕೊಂಡ ವಿಧಾನಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

- **ದಾಖಲೆ ಪರಿಶೀಲನೆ**: ಕಾರ್ಖಾನೆಯಿಂದ ನಿರ್ವಹಿಸಲ್ಪಡುವ, ಲಭ್ಯವಿರುವ ಮತ್ತು ಒದಗಿಸಿದ ಆರೋಪಗಳಿಗೆ ಸಂಬಂಧಿಸಿದಂತೆ ಎಲ್ಲಾ ಕಾನೂನುಬದ್ಧವಾಗಿ ಕಡ್ಡಾಯವಾದ ದಾಖಲೆಗಳು ಮತ್ತು ಇತರ ಸಂಬಂಧಿತ ದಾಖಲೆಗಳನ್ನು ಪರಿಶೀಲಿಸಲಾಗಿದೆ. ಪರಿಶೀಲಿಸಿದ ದಾಖಲೆಗಳ ಪಟ್ಟಿಯನ್ನು ಕೆಳಗೆ ನೀಡಲಾಗಿದೆ:

✓ **ಕಾರ್ಖಾನೆ ಸ್ಥಾಯಿ ಆದೇಶ**

✓ **ಉದ್ಯೋಗಿಗಳ ವಿವರ**: ತನಿಖೆಯ ದಿನಾಂಕದವರೆಗೆ ಒಟ್ಟು ಕಾರ್ಮಿಕರ ಸಂಖ್ಯೆ - ಇಲಾಖಾವಾರು, ಮತ್ತು ಪ್ರತ್ಯೇಕವಾಗಿ ಹಣಿಗೆ ವಿಭಾಗಕ್ಕೆ ಕಾರ್ಮಿಕರ ವಿಭಜನ ಪ್ರಕಾರದೊಂದಿಗೆ: (ಪುರುಷ ಮತ್ತು ಮಹಿಳೆ)

✓ **ನೀತಿ ಮತ್ತು ಕಾರ್ಯವಿಧಾನದ ದಾಖಲೆಗಳು**-ಕೆಲಸದ ಸಮಯ, ಸಂಘದ ಸ್ವಾತಂತ್ರ್ಯ, ಕಿರುಕುಳ-ವಿರೋಧಿ, ಕೆಲಸಗಳ ಕುಂದುಕೊರತೆ ಪರಿಹಾರ ಮತ್ತು ಸಂಭಾವನೆ ನೀತಿಗಳು ಮತ್ತು ಕಾರ್ಯವಿಧಾನಗಳು

✓ **ಕೆಲಸದ ಸಮಯ ಮತ್ತು ವೇತನಗಳು**: ಮಸ್ಟರ್ ರೋಲ್, ಕೆಲಸದ ಸಮಯದ ದಾಖಲೆಗಳು, ಅಧಿಕಾವಧಿ ದಾಖಲೆಗಳು, ವೇತನ ನೋಂದಣಿ, ಪೇಸ್ಲಿಪ್ಸ್ ಮತ್ತು ಮಾದರಿ ಉದ್ಯೋಗಿ ಒಪ್ಪಂದಗಳು

- ✓ **ವಿವಿಧ ಸಮಿತಿಗಳ ಕುರಿತಾದ ದಾಖಲೆಗಳು** (ಕಾರ್ಯ ಸಮಿತಿ ಮತ್ತು ಆಂತರಿಕ ದೂರು ಸಮಿತಿ: ICC) - ಪ್ರಸ್ತುತ ಸದಸ್ಯರು ಮತ್ತು ಸಭೆಯ ನಡಾವಳಿಗಳು (ಕಳೆದ 2 ವರ್ಷಗಳದ್ದು)
- ✓ **ದೂರು ದಾಖಲೆ ಪುಸ್ತಕ**
- ✓ **ಕೆಲಸಗಾರ ತರಬೇತಿ ದಾಖಲೆಗಳು:** ಇಂಡಕ್ಷನ್ ಮತ್ತು ಓರಿಯಂಟೇಶನ್ ಸಂಬಂಧಿತ ಕಾಗದ ಪತ್ರಗಳು/ ದಾಖಲೆಗಳು, ಇಂಡಕ್ಷನ್ ಕೈಪಿಡಿ, ನೀತಿ ಸಂಹಿತೆ ದಾಖಲೆ.
- ✓ ü**ಜೊತೆಗೆ,** ಬ್ರ್ಯಾಂಡ್‌ಗಳು ಹಂಚಿಕೊಂಡ ದಾಖಲೆಗಳು (ವಿಎಫ್‌ಸಿ ಮೂಲಕ) ತನಿಖೆ ಆರಂಭವಾಗುವ ಮುನ್ನ ಆರೋಪಗಳಿಗೆ ಸಂಬಂಧಿಸಿದವು

- **ಕಾರ್ಮಿಕರಿಂದ ಮಾಹಿತಿ ಸಂಗ್ರಹಣೆ (GIFW):** ಪ್ರೊಡಕ್ಷನ್ ಫ್ಲೋರ್, ಕ್ಯಾಂಟೀನ್ ಮತ್ತು ಇತರ ಸ್ಥಳಗಳಲ್ಲಿ ಕೆಲಸಗಾರರು ಚರ್ಚೆಯಲ್ಲಿ ತೊಡಗಿದ್ದರು; ಕಾರ್ಖಾನೆಯ ಒಳಗೆ ಮತ್ತು ಹೊರಗೆ. ಚರ್ಚೆಯ ಉದ್ದೇಶದ ಬಗ್ಗೆ ಅವರಿಗೆ ತಿಳಿಸಲಾಯಿತು ಮತ್ತು ವರದಿ ಮಾಡುವ ಪ್ರಕ್ರಿಯೆಯಲ್ಲಿ ಅವರ ಅನಾಮಧೇಯತೆಯನ್ನು ರಕ್ಷಿಸಲಾಗುವುದು ಎಂಬ ವಿಶ್ವಾಸವನ್ನು ನೀಡಲಾಯಿತು. ಎಲ್ಲಾ ರೀತಿಯ ಕೆಲಸಗಾರರು ಆನ್‌ಸೈಟ್ ಮತ್ತು ಆಫ್‌ಸೈಟ್‌ನಲ್ಲಿ ತೊಡಗಿಸಿಕೊಂಡಿದ್ದರು. **ಒಟ್ಟಾರೆಯಾಗಿ 91 ಕಾರ್ಮಿಕರು GIFW ಪ್ರಕ್ರಿಯೆಯಲ್ಲಿ ಭಾಗವಹಿಸಿದರು : 56 ಕಾರ್ಮಿಕರು ಈಗ ಪ್ರಸ್ತುತದಲ್ಲಿ ಕೆಲಸ ಮಾಡುತ್ತಿರುವವರು ಮತ್ತು 35 ಕಾರ್ಮಿಕರು 2019 ರ ಘಟನೆ ನಡೆದಾಗಿನಿಂದ ಫ್ಯಾಕ್ಟರಿಯನ್ನು ಬಿಟ್ಟವರು[2].**

- **ಸಮಿತಿ ಚರ್ಚೆಗಳು:** ವರ್ಕ್ಸ್ ಕಮಿಟಿಯೊಂದಿಗೆ ತೀವ್ರ ಚರ್ಚೆಗಳನ್ನು ನಡೆಸಲಾಯಿತು. ಸಮಿತಿಯ ಕಾರ್ಯವೈಖರಿ, ಆಪಾದನೆಗಳ ಬಗ್ಗೆ ಕಾರ್ಮಿಕರ ಜ್ಞಾನ, ಕಾರ್ಖಾನೆಯ ಕಾರ್ಯವೈಖರಿ, ಕಳೆದ 2 ವರ್ಷಗಳಲ್ಲಿ ಕಾರ್ಮಿಕರ ಕೆಲಸ ಸಮಿತಿಗೆ ವರದಿ ಮಾಡಿದ ಕುಂದುಕೊರತೆಗಳು ಮತ್ತು ಅದನ್ನು ಪರಿಹರಿಸುವ ಕಾರ್ಯವಿಧಾನವನ್ನು ಅರ್ಥಮಾಡಿಕೊಳ್ಳುವುದು ಇದರ ಉದ್ದೇಶವಾಗಿತ್ತು.

- **ಮ್ಯಾನೇಜ್ಮೆಂಟ್ ಚರ್ಚೆಗಳು:** ಎಚ್‌ಆರ್ ಮತ್ತು ಅನುಸರಣೆ (ಕಂಪ್ಲಿಯನ್ಸ್) ತಂಡದ ಸದಸ್ಯರನ್ನು ಒಳಗೊಂಡಂತೆ ಮ್ಯಾನೇಜ್ಮೆಂಟ್ನೊಂದಿಗೆ ವಿವರವಾದ ಚರ್ಚೆಯನ್ನು ಕಾರ್ಖಾನೆಯೊಳಗಿನ "ಆಂತರಿಕ ನಿರ್ವಹಣಾ ವ್ಯವಸ್ಥೆ" ಯನ್ನು ಅರ್ಥಮಾಡಿಕೊಳ್ಳಲು ಸಂಬಂಧಿತ ನೀತಿಗಳು ಮತ್ತು ಪ್ರಮಾಣಿತ ಕಾರ್ಯಾಚರಣೆಯ ಕಾರ್ಯವಿಧಾನಗಳು, ಅದರ ಅನುಷ್ಠಾನಕ್ಕೆ ಜವಾಬ್ದಾರಿಗಳ ಹಂಚಿಕೆ ಮತ್ತು ಕಾಲಾನುಕ್ರಮವನ್ನು ಅರ್ಥಮಾಡಿಕೊಳ್ಳುವುದು ಆಪಾದನೆಗಳ ಕಡೆಗೆ ನಿರ್ವಹಣಾ (ಮ್ಯಾನೇಜ್ಮೆಂಟ್) ದೃಷ್ಟಿಕೋನ. ಅದಲ್ಲದೆ, ಕೆಲಸಗಾರರ ಸಂಬಂಧಿತ ವಿಷಯಗಳನ್ನು ನೋಡಿಕೊಳ್ಳುತ್ತಿದ್ದ ಮತ್ತು ನಂತರ ರಾಜೀನಾಮೆ ನೀಡಿದ 2 ಮಾಜಿ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ಸಂದರ್ಶಿಸಲಾಯಿತು.

ಪ್ರಸ್ತುತ ನಿರ್ವಹಣೆಯ ಪರವಾಗಿ, ಈ ಕೆಳಗಿನ ಸಿಬ್ಬಂದಿ ಈ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದಾರೆ:

- ✓ ಶ್ರೀ. ಸಂಜಯ್ ಪಿಳ್ಳೈ - ಪಾಧ್ಯಕ್ಷ
- ✓ ಶ್ರೀ ರಮೇಶ್ – ಜನರಲ್ ನೇಜರ್
- ✓ ಶ್ರೀ ಕೇಶವ – ಕಂಪ್ಲಿಯನ್ಸ್ ಧಿಕಾರಿ
- ✓ ಶ್ರೀ. ಅಂಜನ – ಎಚ್ ಆರ್ ಮ್ಯಾನೇಜರ್

2ಈ 35 ಕೆಲಸಗಾರರಲ್ಲಿ 27 ಮಂದಿ ಅಕ್ಟೋಬರ್ 2019 ರ ಘಟನೆಯ ನಂತರ ತಕ್ಷಣವೇ ಕೆಲಸದಿಂದ ತೆಗೆಯಲ್ಪಟ್ಟರು. ಉಳಿದ 8 ಮಂದಿ ರಾಜೀನಾಮೆ ನೀಡಿದರು ಅಥವಾ ನಂತರ ಕೆಲವು ಕಾರಣಗಳಿಗಾಗಿ 2020 ರ ಅವಧಿಯಲ್ಲಿ ಟರ್ಮಿನೇಟ್ ಮಾಡಲಾಯಿತು.

- **ಇತರ ಸ್ಟೇಕ್ ಹೋಲ್ಡರ್ ಗಳೊಂದಿಗೆ ತೊಡಗಿಸಿಕೊಳ್ಳುವುದು** (ಅರೆ-ರಚನಾತ್ಮಕ ಸಂದರ್ಶನಗಳ ಮೂಲಕ): ಕಾರ್ಖಾನೆಯ ಕಾರ್ಮಿಕರು ಮತ್ತು ಮ್ಯಾನೇಜ್ಮೆಂಟ್ ಜೊತೆಗೆ, ತನಿಖಾ ತಂಡವು ಒಕ್ಕೂಟದ (ಸಿಐಟಿಯು) ಪ್ರತಿನಿಧಿಗಳು ಮತ್ತು ವಲಸೆ ಕಾರ್ಮಿಕರು ವಾಸಿಸುತ್ತಿದ್ದ ಕಟ್ಟಡದ ಮಾಲೀಕರೊಂದಿಗೆ ಸಹ ತೊಡಗಿಸಿಕೊಂಡಿದೆ (ಆರೋಪದ ಪ್ರಕಾರ ಅವರ ವಸ್ತುಗಳನ್ನು ತೆಗೆದುಹಾಕಲಾಗಿದೆ) ಆರೋಪಗಳ ಮೇಲೆ ಅವರ ವರ್ಷನ್ನಳನ್ನು ಪಡೆಯಲು.

4. ಸ್ವೀಕರಿಸಿದ ಆರೋಪಗಳ ಮೇಲೆ ತನಿಖಾ ಫಲಿತಾಂಶಗಳು

ಈ ವಿಭಾಗವು ಪ್ರತಿ ಏಳು ಆರೋಪಗಳ ಕುರಿತಾಗಿ ತನಿಖೆಯಿಂದ ಕಂಡುಕೊಂಡ ಅಂಶಗಳನ್ನು ವಿವರಿಸುತ್ತದೆ:

- ಮ್ಯಾನೇಜ್ಮೆಂಟ್ ಮತ್ತು ಕೆಲಸಗಾರರಿಗೆ ಪ್ರತ್ಯೇಕವಾಗಿ ಮತ್ತು ಕಾರ್ಖಾನೆಯಲ್ಲಿನ ರೆಕಾರ್ಡ್ ವಿಮರ್ಶೆಗಳ ಸಂಶೋಧನೆಗಳ ಫಲಿತಾಂಶಗಳನ್ನು ಪ್ರಸ್ತುತಪಡಿಸಲಾಗಿದೆ (ಆನ್‌ಸೈಟ್ ಮತ್ತು ಆಫ್‌ಸೈಟ್).
- ಯೂನಿಯನ್ ಪ್ರತಿನಿಧಿಗಳು ಆಫ್‌ಸೈಟ್ ಕಾರ್ಮಿಕರ ವರ್ಷನ್ ಗಳನ್ನು ಬೆಂಬಲಿಸಿದರಿಂದ (30 ಕ್ಕೂ ಹೆಚ್ಚು ಕಾರ್ಮಿಕರ), ಅದನ್ನು ಪ್ರತ್ಯೇಕವಾಗಿ ಉಲ್ಲೇಖಿಸಲಾಗಿಲ್ಲ.

- ಸಂಬಂಧಿತ ವಿಭಾಗದಲ್ಲಿ ವಲಸೆ ಕಾರ್ಮಿಕರ ಬಾಡಿಗೆ ಕಟ್ಟಡದ ಮಾಲೀಕರೊಂದಿಗೆ ಚರ್ಚೆಯನ್ನು ಸೇರಿಸಲಾಗಿದೆ (ಕಿರುಕುಳ ಮತ್ತು ಬೆದರಿಕೆ ಆರೋಪ)
- ಅನ್ವಯವಾಗುವಲ್ಲೆಲ್ಲಾ ಕಾನೂನು ಉಲ್ಲೇಖಗಳನ್ನು ಸಹ ಒದಗಿಸಲಾಗಿದೆ.
- ಪ್ರತಿ ಆಪಾದನೆಯ ಕೊನೆಯಲ್ಲಿ ನಿಸ್ಕರ್ಷೆಯ/ಪರಿಸಮಾಪ್ತಿ ಜೊತೆಗೆ ತನಿಖಾ ತಂಡದ ಶಿಫಾರಸ್ಸುಗಳನ್ನು ಒದಗಿಸಲಾಗಿದೆ.

4.1 . ಕೆಲಸದ ವ್ಯವಸ್ಥೆ

ಆರೋಪ 1: ಪ್ರತಿ ಆಪರೇಟರ್‌ಗೆ 5 ಯಂತ್ರಗಳ ಬದಲಿಗೆ 10 ಹೆಣಿಗೆ ಯಂತ್ರಗಳನ್ನು ನಿರ್ವಹಿಸುವಂತೆ ಕೆಲಸಗಾರರನ್ನು ಒತ್ತಾಯಿಸಲಾಯಿತು - ವೇತನದಲ್ಲಿ ಯಾವುದೇ ಹೆಚ್ಚಳವಿಲ್ಲದೆ.

► **ಮ್ಯಾನೇಜ್ಮೆಂಟ್ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ**: 2011 ರಲ್ಲಿ ಕಾರ್ಖಾನೆಯ ಆರಂಭದಿಂದಲೂ 10 ಯಂತ್ರಗಳಲ್ಲಿ ಕೆಲಸ ಮಾಡುವುದು ಪ್ರಮಾಣಿತ ಮತ್ತು ಒಪ್ಪಿಕೊಂಡ ಅಭ್ಯಾಸ (ಮತ್ತು ಕಾರ್ಮಿಕರು 5 ಯಂತ್ರಗಳಲ್ಲಿ ಅಸಾಧಾರಣ ಸಂದರ್ಭಗಳಲ್ಲಿ ಮಾತ್ರ ಕೆಲಸ ಮಾಡುತ್ತಿದ್ದರು ಮತ್ತು ವಿಶೇಷವಾಗಿ ಉತ್ಪಾದನೆ ಕಡಿಮೆ ಇದ್ದಾಗ) ಎಂದು ಮ್ಯಾನೇಜ್ಮೆಂಟ್ ಸಮಿತಿಯು ಮೌಖಿಕವಾಗಿ ಹಂಚಿಕೊಂಡಿದೆ, ಮತ್ತು ಯಾವುದೇ ಕಾರ್ಮಿಕರ ಮೇಲೆ ಹಠಾತ್ ಬದಲಾವಣೆ ಅಥವಾ ಒತ್ತಡ ಇರಲಿಲ್ಲ. 10 ಯಂತ್ರಗಳಲ್ಲಿ ಕೆಲಸ ಮಾಡಲು ಕೆಲಸಗಾರರನ್ನು "ಒತ್ತಾಯಿಸುವ" ಆರೋಪವನ್ನು ಅವರು ನಿರಾಕರಿಸಿದರು.

► **ದಾಖಲೆಗಳಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ**: 2011 ರಿಂದ ಕಾರ್ಖಾನೆಯಲ್ಲಿನ ವರ್ಷವಾರು ಯಂತ್ರಗಳ ಸಂಖ್ಯೆ ಮತ್ತು ಕಾರ್ಮಿಕರ ಸಂಖ್ಯೆಯನ್ನು ಮ್ಯಾನೇಜ್‌ಮೆಂಟ್ ಹಂಚಿಕೊಳ್ಳಲಿಲ್ಲ, ಇದರಿಂದ ಕೆಲಸಗಾರರ ನಿಜವಾದ ಯಂತ್ರಗಳ ಸಂಖ್ಯೆಯನ್ನು ಲೆಕ್ಕಹಾಕಬಹುದಾಗಿತ್ತು, "ಈ ಪ್ರಕರಣವು ವ್ಯಾಜ್ಯದಲ್ಲಿದೆ ಮತ್ತು ಹೀಗೆ ವಿವರಗಳು" ಒದಗಿಸಲಾಗುವುದಿಲ್ಲ" ಎಂದು ಹೇಳಿ ಜಾರಿಕೊಂಡರು. ಹೆಣಿಗೆ ಆಪರೇಟರ್ ನಿರ್ವಹಿಸುವ ಹೆಣಿಗೆ ಯಂತ್ರಗಳ ಸಂಖ್ಯೆಗಳ ಬಗ್ಗೆ ಕಾರ್ಖಾನೆಯಲ್ಲಿ ಯಾವುದೇ ಲಿಖಿತ ಮತ್ತು / ಅಥವಾ ಅನುಮೋದಿತ ರೂಢಿಗಳಿರಲಿಲ್ಲ (ನೊರ್ಮ್ಸ್) ಮತ್ತು ಯಾವುದೇ ಅನುಮೋದಿತ/ ಸಹಿ ಮಾಡಿದ ಕಂಪನಿ ನೀತಿಗಳು ಮತ್ತು ಕಾರ್ಯವಿಧಾನಗಳ ಭಾಗವಾಗಿ ಸಹ ಕಂಡುಬರಲಿಲ್ಲ. ಇದು ಕಾರ್ಮಿಕರಿಗೆ ನೀಡಲಾದ ಒಪ್ಪಂದ ಪತ್ರಗಳ ಭಾಗವೂ ಅಲ್ಲ[3]. ಕಾರ್ಖಾನೆಯ ಸ್ಥಾಯಿ ಆದೇಶ ಮತ್ತು ಪ್ರಸ್ತುತ ಕೆಲಸಗಾರರ ಸಿಬ್ಬಂದಿ ಕಡತಗಳಲ್ಲಿ ಇರಿಸಲಾಗಿರುವ ಪ್ರವೇಶ ದಾಖಲಾತಿಯು "ಇಲಾಖೆಗಳ ಬದಲಾವಣೆ ಮತ್ತು ಕೆಲಸದ ಹಂಚಿಕೆ" ಮ್ಯಾನೇಜ್ಮೆಂಟ್ ವಿವೇಚನೆಯಂತೆ ಎಂದು ಉಲ್ಲೇಖಿಸಿದರೆ, ಪ್ರತಿ ಕೆಲಸಗಾರನಿಗೆ ಎಷ್ಟು ಸಂಖ್ಯೆಯ ಯಂತ್ರಗಳ ಹಂಚಿಕೆ ಮಾಡಬೇಕು ಎನ್ನುವುದರ ಬಗ್ಗೆ ಅವರು ಮೌನವಾಗಿದ್ದಾರೆ. ಹೆಣಿಗೆ ಕೆಲಸಗಾರನಿಗೆ ಕೆಲಸ ಮಾಡಲು ನಿಯೋಜಿಸಲಾದ ಯಂತ್ರಗಳ ಸಂಖ್ಯೆಯಲ್ಲಿ ಯಾವುದೇ ಸೂಚನೆ ಅಥವಾ ಸುತ್ತೋಲೆ ಕೂಡ ಕಂಡುಬಂದಿಲ್ಲ. ವರ್ಕ್ಸ್ ಕಮಿಟಿ ಮೀಟಿಂಗ್ ಮಿನಿಟ್ಸ್ ರಿಜಿಸ್ಟರ್ ಕೂಡ ಹೆಣಿಗೆ ಯಂತ್ರಗಳ ಸಂಖ್ಯೆಗೆ ಸಂಬಂಧಿಸಿದ ಯಾವುದೇ ಚರ್ಚೆ ಅಥವಾ ನಿರ್ಧಾರವನ್ನು ಒಳಗೊಂಡಿಲ್ಲ.

3 ಈ ವರ್ಷದಿಂದ (2020), ಅವರು 10 ಯಂತ್ರಗಳಲ್ಲಿ ಕೆಲಸ ಮಾಡುತ್ತಾರೆ ಎಂದು ಕಾರ್ಮಿಕರಿಂದ ಒಂದು ಪ್ರಮಾಣಪತ್ರವನ್ನು ತೆಗೆದುಕೊಳ್ಳಲಾಗುತ್ತಿದೆ ಮತ್ತು 10 ಯಂತ್ರಗಳನ್ನು ನಿರ್ವಹಿಸುವಲ್ಲಿ ಅವರಿಗೆ ಯಾವುದೇ ಆಕ್ಷೇಪಣೆ ಅಥವಾ ಸಮಸ್ಯೆ ಇಲ್ಲ: ಇದು ಪ್ರಸ್ತುತದಿಂದ ಸಹಿ ಮಾಡಿದ ಕಾರ್ಯ

► **ಕಾರ್ಮಿಕರ ಜೊತೆಗಿನ ಚರ್ಚೆಗಳಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ಕಾರ್ಖಾನೆಯ ಆರಂಭದಿಂದಲೂ ಹೆಣಿಗೆ ಆಪರೇಟರ್‌ಗಳು 10 ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅದು ಪ್ರಮಾಣಿತ ರೂಢಿ ಮತ್ತು ಯಂತ್ರಗಳ ಸಂಖ್ಯೆಯನ್ನು 5 ರಿಂದ 10 ಕ್ಕೆ ಹೆಚ್ಚಿಸಲಾಗಿಲ್ಲ ಎಂದು ಆನ್‌ಸೈಟ್ (ಪ್ರಸ್ತುತ ಕೆಲಸ ಮಾಡುತ್ತಿರುವ) ಕಾರ್ಮಿಕರು ಹಂಚಿಕೊಂಡಿದ್ದಾರೆ: ಈಗ ಅವರು 10 ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹೀಗಾಗಿ ಅವರು ಮ್ಯಾನೇಜ್ಮೆಂಟ್ ವರ್ಷನ್ ಅನ್ನು ಬೆಂಬಲಿಸಿದರು. ಆದಾಗ್ಯೂ, ಪ್ರತಿಕ್ರಿಯೆಗಳು ಮತ್ತು ಉತ್ತರಗಳಿಂದ ಅವರ ಪ್ರತ್ಯುತ್ತರವು ಮ್ಯಾನೇಜ್‌ಮೆಂಟ್[4] ನಿಂದ ಹೆಚ್ಚು ಪ್ರಭಾವಿತವಾಗಿವೆ ಎಂದು ಕಾಣಬರುತ್ತದೆ.

ಹೆಚ್ಚಿನ ಸಂಖ್ಯೆಯ ಕಾರ್ಮಿಕರು (30 ಕ್ಕಿಂತ ಹೆಚ್ಚು) ಆಫ್‌ಸೈಟ್ ಚರ್ಚೆಯಲ್ಲಿ ಹಂಚಿಕೊಂಡಿದ್ದೇನೆಂದರೆ, 2011 ರಿಂದ 2019 ರ ಅಕ್ಟೋಬರ್ 14 ರವರೆಗೆ ಹೆಣಿಗೆ ಆಪರೇಟರ್‌ಗಳು 5 ಯಂತ್ರಗಳಲ್ಲಿ ಕೆಲಸ ಮಾಡುತ್ತಿದ್ದಾರೆ ಮತ್ತು ಅವರು ಕೆಲಸ ಮಾಡಲು ಅಗತ್ಯವಿರುವ ಯಂತ್ರಗಳ ಸಂಖ್ಯೆಯನ್ನು ಮನಗೆಮೆಂಟ್ನಿಂದ ಕಾರ್ಮಿಕರಿಗೆ ಅವರು ಕೆಲಸಕ್ಕೆ ಸೇರುವ ಸಮಯದಲ್ಲಿ ಮೌಖಿಕವಾಗಿ ಹೇಳಿದ್ದಾರೆಂದು ತಿಳಿಸಿದರು. ಅದೇ ಸಮಯದಲ್ಲಿ, ಪ್ರತಿ ಕೆಲಸಗಾರನಿಗೆ 5 ಯಂತ್ರಗಳಾಗಿದ್ದರೂ, ಕೆಲವು ಕೆಲಸಗಾರರ ಗೈರುಹಾಜರಿಯ ಸಂದರ್ಭದಲ್ಲಿ, ಅವರು 6 ಯಂತ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವುದು ಅಲಿಖಿತ ರೂಢಿಯಲ್ಲಿ ಇದೆ. ಇದು ಕೆಲವು ಸಂದರ್ಭಗಳಲ್ಲಿ 4 ರಿಂದ 6 ರವರೆಗೆ ಇರಬಹುದು ನಿಜವಾದ ಅಗತ್ಯವನ್ನು ಅವಲಂಬಿಸಿ ಮತ್ತು ಕೆಲಸಗಾರರೆಲ್ಲರೂ ವ್ಯವಸ್ಥೆಯಲ್ಲಿ ಚೆನ್ನಾಗಿದ್ದರು.

ಆದಾಗ್ಯೂ, 2019 ರ ದಸರಾ ರಜಾದಿನಗಳಿಗೆ ಒಂದು ದಿನ ಮುಂಚಿತವಾಗಿ ಕೆಲಸಗಾರರಿಗೆ ಮೌಖಿಕವಾಗಿ ತಿಳಿಸಲಾಯಿತು, 14 ನೇ ಅಕ್ಟೋಬರ್ 2019 ರಿಂದ, ದಸರಾ ರಜೆಯ ನಂತರ ಕಾರ್ಖಾನೆ ತೆರೆದಾಗ, ಎಲ್ಲಾ ಹೆಣಿಗೆ ಆಪರೇಟರ್‌ಗಳು ಪ್ರತಿದಿನ 10 ಯಂತ್ರಗಳಲ್ಲಿ ಕೆಲಸ ಮಾಡಬೇಕಾಗುತ್ತದೆ. ಈ ನಿರ್ಧಾರವನ್ನು ಮ್ಯಾನೇಜ್‌ಮೆಂಟ್ ಮಾತ್ರ ತೆಗೆದುಕೊಂಡಿದೆ ಮತ್ತು ಯಂತ್ರಗಳ ಸಂಖ್ಯೆಗೆ ಸಂಬಂಧಿಸಿದ ರೂಢಿಯನ್ನು ಬದಲಿಸುವಲ್ಲಿ ಯಾವುದೇ ಕೆಲಸಗಾರರ ತೊಡಗಿಸಿಕೊಳ್ಳುವಿಕೆ ಇರಲಿಲ್ಲ.ಕೆಲಸಗಾರರ ಜೊತೆ ಅಥವಾ ಕಾರ್ಖಾನೆಯೊಳಗೆ ರಚಿಸಲಾದ ಯಾವುದೇ ಸಮಿತಿಯೊಂದಿಗೆ ಯಾವುದೇ ಪೂರ್ವ ಚರ್ಚೆಯನ್ನು ಮಾಡಲಾಗಿಲ್ಲ, ಕೆಲಸ ಸಮಿತಿ ಸೇರಿದಂತೆ. ಯಂತ್ರಗಳ ಸಂಖ್ಯೆಯಲ್ಲಿನ ಹೆಚ್ಚಳವನ್ನು ಮೌಖಿಕವಾಗಿ ತಿಳಿಸುವ ಮೊದಲು ಕಾರ್ಮಿಕರಿಂದ ಯಾವುದೇ ಒಪ್ಪಿಗೆಯನ್ನು ಸಹ ಕೇಳಲಾಗಿಲ್ಲ ಮತ್ತು ಅವರ ಕೆಲಸದ ವ್ಯವಸ್ಥೆಯನ್ನು ಬದಲಿಸಲು ಯಾವುದೇ ಕಾರಣವನ್ನು ಕಾರ್ಮಿಕರಿಗೆ ನೀಡಲಾಗಿಲ್ಲ. ಆರಂಭದಿಂದಲೂ ಅನುಸರಿಸುತ್ತಿದ್ದ ಸೆಟ್ ನೊರ್ಮ್ಸ್ ಬದಲಾವಣೆಗೆ ಸಂಬಂಧಿಸಿದಂತೆ ಯಾವುದೇ ಲಿಖಿತ ಸೂಚನೆ ಅಥವಾ ಸಂವಹನ ಇರಲಿಲ್ಲ.

5 ಹೆಚ್ಚುವರಿ ಯಂತ್ರಗಳಲ್ಲಿ ಕೆಲಸ ಮಾಡಲು ಹೆಣಿಗೆ ಆಪರೇಟರ್‌ಗಳಿಗೆ ವೇತನದಲ್ಲಿ ಯಾವುದೇ ಹೆಚ್ಚಳ ವೇತನ ಅಥವಾ ಪ್ರೋತ್ಸಾಹ ಅಥವಾ ಪ್ರಯೋಜನಗಳ ಬಗ್ಗೆ ಯಾವುದೇ ಸಂವಹನ ಇರಲಿಲ್ಲ

ಹೆಣಿಗೆ ಕೆಲಸಗಾರರು ದಸರಾ ರಜಾದಿನಗಳ ನಂತರ 14 ನೇ ಅಕ್ಟೋಬರ್ 2019 ರಂದು ಕಾರ್ಖಾನೆಗೆ ಕೆಲಸಕ್ಕೆ ರಿಪೋರ್ಟ್ ಮಾಡಿಕೊಂಡರು ಮತ್ತು ಅವರು 10 ಯಂತ್ರಗಳಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ ಎಂದು ಆಡಳಿತ ಮಂಡಳಿಗೆ ತಿಳಿಸಿದರು. ತನಿಖಾ ತಂಡಕ್ಕೆ ಕಾರ್ಮಿಕರು ತೋರಿಸಿದ ಕಾರಣಗಳೆಂದರೆ ಉತ್ಪನ್ನದ ಗುಣಮಟ್ಟವನ್ನು ಕಾಪಾಡಿಕೊಳ್ಳಲು ಸಾಧ್ಯವಾಗಲಿಲ್ಲ ಏಕೆಂದರೆ ವಿವಿಧ ಬ್ರಾಂಡ್‌ಗಳ ಉತ್ಪನ್ನಗಳ ನಿರ್ವಹಣೆಯೊಂದಿಗೆ, ಅವರು ನಿರಂತರವಾಗಿ ಕೆಲಸವನ್ನು ಗಮನಿಸಬೇಕಾಗಿತ್ತು. ಯಂತ್ರಗಳಲ್ಲಿ ನಡೆಯುತ್ತಿದೆ ಮತ್ತು ಕೆಲವು ಕಾರಣಗಳಿಂದ ಯಂತ್ರವನ್ನು ನಿಲ್ಲಿಸಿದರೆ, ಅವರು ಅದನ್ನು ಸರಿಪಡಿಸಲು ಸುಮಾರು 20 ನಿಮಿಷಗಳನ್ನು ಕಳೆಯಬೇಕಾಗುತ್ತದೆ ಮತ್ತು 5-6 ಯಂತ್ರಗಳನ್ನು ಒಮ್ಮೆಗೇ ನಿಲ್ಲಿಸಿದರೆ ಉತ್ಪಾದನೆ ಕಡಿಮೆಯಾಗುತ್ತದೆ ಮತ್ತು ಯಂತ್ರಗಳನ್ನು ಗಮನಿಸದಿದ್ದರೆ ಅದು ಉತ್ಪನ್ನದ ಗುಣಮಟ್ಟದ ಮೇಲೆ ಪರಿಣಾಮ ಬೀರುತ್ತದೆ. ಯಂತ್ರಗಳಲ್ಲಿ ಕೆಲಸ ಮಾಡುವಾಗ, ಕೆಲಸಗಾರರಿಗೆ ಟೆನ್ಶನ್ ಅಡ್ಜಸ್ಟ್ ಮಾಡುವುದು,, ಲೋಡ್, ರೀ -ಸ್ಟಾರ್ಟ್, ಯಂತ್ರದಲ್ಲಿ ಬಟ್ಟೆಯನ್ನು ಸ್ಕ್ರೀನ್ ಮೂಲಕ ಅಳತೆ ಮಾಡುವುದು ಮತ್ತು ಯಂತ್ರಕ್ಕೆ ಜೋಡಿಸಲಾದ ಟೇಪ್ ಅನ್ನು ಅಳೆಯುವುದು ಅಗತ್ಯವಾಗಿತ್ತು. ಹೀಗಾಗಿ 10 ಯಂತ್ರಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಮತ್ತು ಒಬ್ಬ ಕಾರ್ಮಿಕರಿಂದ ಉತ್ಪನ್ನದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಅವರಿಗೆ ಮಾನವೀಯವಾಗಿ ಸಾಧ್ಯವಾಗಲಿಲ್ಲ. ಇದರ ಮೇಲೆ, ಹೆಚ್ಚುವರಿ 5 ಯಂತ್ರಗಳಲ್ಲಿ ಕೆಲಸ ಮಾಡಲು ಯಾವುದೇ ಹೆಚ್ಚುವರಿ ವೇತನ ಪಾವತಿ ಅಥವಾ ಪ್ರೋತ್ಸಾಹವಿಲ್ಲ ಧನವಿಲ್ಲ. ಹಾಗೂ 2011 ರಿಂದ ಕಾರ್ಖಾನೆ ಆರಂಭವಾದಾಗಿನಿಂದಲೂ ಪ್ರಮಾಣಿತ ಅಭ್ಯಾಸವಾಗಿದ್ದರೂ ಕಳೆದ 3 ವರ್ಷಗಳಿಂದ ಅವರ ವೇತನದಲ್ಲಿ ವಾರ್ಷಿಕ ಹೆಚ್ಚಳವಿಲ್ಲ,

4 ಕಾರ್ಖಾನೆಯಲ್ಲಿ ಕಾರ್ಮಿಕರೊಂದಿಗೆ ತನಿಖಾ ತಂಡವು ಸಂವಹನ ನಡೆಸುವಾಗ ಸ್ನೇಹಪರ ಮತ್ತು ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದರೂ ಸಹ, ಅವರಲ್ಲಿ ಭಯ ಮತ್ತು ಆತಂಕವನ್ನು ಸ್ಪಷ್ಟವಾಗಿ ಗಮನಿಸಿದೆ

ಇದಲ್ಲದೆ, ಈ ಹಿಂದೆ ಗುಣಮಟ್ಟ ಮತ್ತು ಉತ್ಪಾದನೆ ಎರಡೂ ಯಂತ್ರಗಳ ಮೇಲೆ ಹೆಚ್ಚಾಗಿ ಅವಲಂಬಿತವಾಗಿತ್ತು ಎಂದು ತಿಳಿದಿದ್ದರೂ ಸಹ, ಉತ್ಪಾದನಾ ಮ್ಯಾನೇಜರ್, ಕಡಿಮೆ ಉತ್ಪಾದನೆ ಮತ್ತು ಗುಣಮಟ್ಟಕ್ಕಾಗಿ ಕಾರ್ಮಿಕರನ್ನು ಗದರಿಸುತ್ತಿದ್ದರು / ಅವಾಚ್ಯ ಶಬ್ದಗಳಿಂದ ನಿಂದಿಸುತ್ತಿದ್ದರು. ಅಕ್ಟೋಬರ್ 2019 ಕ್ಕಿಂತ ಮೊದಲು, ಯಂತ್ರಗಳನ್ನು ನಿರ್ವಹಿಸುವುದರೊಂದಿಗೆ ಬಟ್ಟೆಯಲ್ಲಿನ ದೋಷಗಳನ್ನು ಸರಿಪಡಿಸುವ ಜವಾಬ್ದಾರಿಯನ್ನು ಆಪರೇಟರ್‌ಗಳು ಹೊಂದಿದ್ದರು ಮತ್ತು ಆದ್ದರಿಂದ ಕೆಲಸಗಾರರಿಗೆ 10 ಯಂತ್ರಗಳನ್ನು ನಿರ್ವಹಿಸಲು ಸಾಧ್ಯವಾಗಲಿಲ್ಲ.

ಈ ಕಾರಣಗಳಿಂದಾಗಿ ಯಾವುದೇ ವೇತನ ಹೆಚ್ಚಳವಿಲ್ಲದೆಯೆ ಮತ್ತು ಪ್ರೊಡಕ್ಷನ್ ಮ್ಯಾನೇಜರ್ ನಿಂದ ಮೌಖಿಕ ನಿಂದನೆ ಹೆಚ್ಚಾಗುತ್ತದೆ ಎನ್ನುವ ಭಯವಿದ್ದರೂ ಸಹ, 100 ಪ್ರೊಬೇಷನರಿ ಮತ್ತು 150 ಕಾಯಂ ಕೆಲಸಗಾರರು ಸೇರಿದಂತೆ 250 ಕಾರ್ಮಿಕರು ಹೆಣಿಗೆ ವಿಭಾಗದಲ್ಲಿ 10 ಯಂತ್ರಗಳಲ್ಲಿ ಕೆಲಸ ಮಾಡಲು ನಿರಾಕರಿಸಿದರು.

ಮೇಲೆ ಹೇಳಿದ ಕೆಲಸಗಾರರು 10 ಯಂತ್ರಗಳಲ್ಲಿ ಕೆಲಸ ಮಾಡಲು ಒಪ್ಪಲಿಲ್ಲ ಮತ್ತು ಮ್ಯಾನೇಜ್ಮೆಂಟ್ ಯಾವುದೇ ಪರಿಹಾರವನ್ನು ನೀಡಲು ಸಾಧ್ಯವಾಗಲಿಲ್ಲ. ಅಕ್ಟೋಬರ್ 15 ರಂದು, ಅವರು 10 ಯಂತ್ರಗಳಲ್ಲಿ ಕೆಲಸ ಮಾಡಲು ಸಿದ್ಧವಿಲ್ಲದಿದ್ದರೆ ಕಾರ್ಖಾನೆಯ ಆವರಣವನ್ನು ತೊರೆಯುವಂತೆ ಹೇಳಲಾಯಿತು. 5 ಯಂತ್ರಗಳಲ್ಲಿ ಕೆಲಸ ಮಾಡಲು ಅವಕಾಶ ನೀಡಿದರೆ ಮತ್ತು ಅವರ ಸಂಬಳ ಹೆಚ್ಚಳವನ್ನು ಖಚಿತಪಡಿಸಿದರೆ ಮಾತ್ರ ಕೆಲಸಕ್ಕೆ ಸೇರುವುದಾಗಿ 16 ಅಕ್ಟೋಬರ್, 2019 ರಂದು ಕಾರ್ಮಿಕರು ಮ್ಯಾನೇಜ್ಮೆಂಟ್ಗೆ ತಿಳಿಸಿದರು. ಮ್ಯಾನೇಜ್ಮೆಂಟ್ ಮಾತ್ರ ಕೆಲಸಗಾರರ ಜೊತೆ ತೊಡಗಿಸಿಕೊಳ್ಳುವುದು/ಚರ್ಚೆ/ಸಾಮೂಹಿಕ ಚೌಕಾಶಿಯ ಯಾವುದೇ ಪ್ರಕ್ರಿಯೆಯನ್ನು ಅಳವಡಿಸಿಕೊಳಲಿಲ್ಲ ಮತ್ತು ಈ ವಿಷಯವನ್ನು ಕೆಲಸದ ಸಮಿತಿಯಲ್ಲಿ[5] ಚರ್ಚಿಸಲಾಗಿಲ್ಲ (ಇದು ಕಾರ್ಯ ಸಮಿತಿಯ ದಾಖಲೆಗಳಿಂದ ಸ್ಪಷ್ಟವಾಗಿದೆ). ಬದಲಿಗೆ ಮ್ಯಾನೇಜ್ಮೆಂಟ್ ಮೊದಲು 10 ಯಂತ್ರಗಳಲ್ಲಿ ಕೆಲಸ ಆರಂಭಿಸಲು ಮತ್ತು ನಂತರ ಇತರ ಸಮಸ್ಯೆಗಳನ್ನು ನೋಡುತ್ತೇವೆಂದು ಒತ್ತಾಯಿಸುತ್ತಲೇ ಇತ್ತು. ಇದರ ನಂತರ, ಕಾರ್ಮಿಕರು ಒಕ್ಕೂಟಕ್ಕೆ ಸೇರಿದರು ಮತ್ತು ಕಾರ್ಖಾನೆಯ ಹೊರಗೆ ಬ್ಯಾನರ್ ಮತ್ತು ಧ್ವಜಗಳೊಂದಿಗೆ ಮುಷ್ಕರ ಮತ್ತು ಪ್ರದರ್ಶನ/ಪ್ರತಿಭಟನೆಗೆ ಹೋದರು.

ಇದು ನಂತರ 100 ಪ್ರೊಬೇಷನರಿ ಮತ್ತು 150 ಕಾಯಂ ಕೆಲಸಗಾರರನ್ನು ಹೆಣಿಗೆ ಇಲಾಖೆಯಿಂದ ಟರ್ಮಿನೇಟ್ಗೊಳಿಸಲು ಎಡೆ ಮಾಡಿಕೊಟ್ಟಿತು. ಆದಾಗ್ಯೂ, ತನಿಖಾ ತಂಡವು "ಟರ್ಮಿನೇಷನ್" ಸಮಸ್ಯೆಯನ್ನು ನೋಡಲಿಲ್ಲ ಏಕೆಂದರೆ ಅದು ಈಗ ಕಾನೂನು ಪ್ರಕ್ರಿಯೆಯಲ್ಲಿದೆ ಮತ್ತು ತನಿಖಾ ಪ್ರಕ್ರಿಯೆಯ ಭಾಗವಾಗಿರಲಿಲ್ಲ.

ತನಿಖೆಯ ದಿನಗಳಲ್ಲಿ, ಪ್ರಸ್ತುತ ಆಪರೇಟರ್‌ಗಳು 10 ಯಂತ್ರಗಳಲ್ಲಿ ಕೆಲಸ ಮಾಡುತ್ತಿರುವುದು ಕಂಡುಬಂದಿದೆ. ಆದಾಗ್ಯೂ, ಈ ಯಂತ್ರಗಳೊಳಗಿನ ಸಂಪೂರ್ಣ "ಪ್ರೋಗ್ರಾಮಿಂಗ್" ಅನ್ನು ಈಗ ಬದಲಾಯಿಸಲಾಗಿದೆ ಮತ್ತು ಅವರು ಒಂದು ಬ್ರಾಂಡ್‌ನ ಉತ್ಪನ್ನಕ್ಕಾಗಿ ಮಾತ್ರ ಕೆಲಸ ಮಾಡುತ್ತಿದ್ದಾರೆ ಎಂದು ಕಾರ್ಮಿಕರು ವಿವರಿಸಿದರು.ಇದರಿಂದಾಗಿ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಮೂಲಕ ಯಾವುದೇ ಸಮಸ್ಯೆ ಇಲ್ಲದೆ 10 ಯಂತ್ರಗಳಲ್ಲಿ ಕೆಲಸ ಮಾಡುವುದು ಈಗ ಮಾನವೀಯವಾಗಿ ಸಾಧ್ಯವಾಗಿದೆ, ಇದೇ ಸನ್ನಿವೇಶ ಅಕ್ಟೋಬರ್ 2019 ರ ಮೊದಲು ಇರಲಿಲ್ಲ .

ಮೊದಲೇ ಹೇಳಿದಂತೆ, ಮೇಲಿನ ಹೇಳಿಕೆಗಳು ಹೆಚ್ಚಿನ ಸಂಖ್ಯೆಯ ಕಾರ್ಮಿಕರು (30 ಕ್ಕಿಂತ ಹೆಚ್ಚು) ಒದಗಿಸಿದ ಮಾಹಿತಿಯ ವಿಶ್ಲೇಷಣೆಯನ್ನು ಆಧರಿಸಿವೆ, ಇವುಗಳನ್ನು ಯೂನಿಯನ್ ಪ್ರತಿನಿಧಿಗಳು ಸಹ ಬೆಂಬಲಿಸಿದರು.

- **ಯೂನಿಯನ್ ಪ್ರತಿನಿಧಿಗಳ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ಯೂನಿಯನ್ ಪ್ರತಿನಿಧಿಗಳು 5 ಯಂತ್ರಗಳಲ್ಲಿ ಕೆಲಸ ಮಾಡುವುದು ಅಕ್ಟೋಬರ್ 2019 ರ ಮೊದಲು ಪ್ರಮಾಣಿತ ಅಭ್ಯಾಸವಾಗಿತ್ತು ಮತ್ತು 2019 ರ ಅಕ್ಟೋಬರ್‌ನಿಂದ 10 ಯಂತ್ರಗಳಲ್ಲಿ ಕೆಲಸ ಮಾಡುವಂತೆ ಕೆಲಸಗಾರರನ್ನು ಒತ್ತಾಯಿಸಲಾಯಿತು, ಇದನ್ನು 250 ಕಾರ್ಮಿಕರು (150 ಖಾಯಂ ಮತ್ತು 100 ಪ್ರೊಬೇಷನರಿ) ಒಪ್ಪಲು ನಿರಾಕರಿಸಿದರು.ಈ ವಿಷಯವನ್ನು ಕಾರ್ಮಿಕ ಇಲಾಖೆಗೆ ತಮ್ಮ ಆಪಾದನಾ ಪತ್ರದಲ್ಲಿ ವರದಿ ಮಾಡಲಾಗಿದೆ ಮತ್ತು ಈ ಪತ್ರವನ್ನು ತನಿಖೆಯ ಮೊದಲು ಬ್ರಾಂಡ್‌ಗಳು ತನಿಖಾ ತಂಡಕ್ಕೆ ಒದಗಿಸಲಾಗಿದೆ ಎಂದು ಅವರು ಹಂಚಿಕೊಂಡಿದ್ದಾರೆ.

5 "ವರ್ಕ್ಸ್ ಕಮಿಟಿ" ಎನ್ನುವುದು ಕೈಗಾರಿಕಾ ವಿವಾದಗಳ ಕಾಯಿದೆ 1947 ರ ಪ್ರಕಾರ, 100 ಅಥವಾ ಹೆಚ್ಚಿನ ಕಾರ್ಮಿಕರನ್ನು ಹೊಂದಿರುವ ಯಾವುದೇ ಕೈಗಾರಿಕಾ ಸಂಸ್ಥೆಗೆ ಕಾನೂನಿನ ಅವಶ್ಯಕ ಅಂಶ ಮತ್ತು ಈ ಸಮಿತಿಯು ಸ್ಥಾಪನೆಯೊಳಗೆ ಸಂಭವಿಸುವ ಯಾವುದೇ ಕೈಗಾರಿಕಾ "ವಿವಾದ" ಕ್ಕೆ ಪರಿಹಾರ ಪ್ರಕ್ರಿಯೆಯಲ್ಲಿ ಭಾಗಿಯಾಗುವ ನಿರೀಕ್ಷೆಯಿದೆ.

- **ಕಾನೂನು ಉಲ್ಲೇಖಗಳು :** ಪ್ರತಿ ಕೆಲಸಗಾರನಿಗೆ ಎಷ್ಟು ಸಂಖ್ಯೆಯ ಹೆಣಿಗೆ ಯಂತ್ರಗಳನ್ನು ನಿರ್ವಹಣೆ ಮಾಡಬೇಕೆಂಬ ನಿಯಮಗಳು ಯಾವುದೇ ಕಾನೂನು ನಿಬಂಧನೆಗೆ ಅವಕಾಶವಿಲ್ಲದ ಕಾರಣ ಈ ಉಲ್ಲೇಖಕ್ಕೆ ಕಾನೂನು ಉಲ್ಲೇಖವು ಅನ್ವಯಿಸುವುದಿಲ್ಲ

- **ಪರಿಸಮಾಪ್ತಿ:** ಕಾರ್ಖಾನೆಯ ಮಟ್ಟದಲ್ಲಿ ಯಾವುದೇ ಲಿಖಿತ ನೀತಿ /ಕಾರ್ಯವಿಧಾನ /ರೂಡಿಗಳು/ಸುತ್ತೋಲೆಗಳು /ಸೂಚನೆಗಳು / ಫ್ಯಾಕ್ಟರಿ ಒಳಗಡೆ ಸಂವಹನಗಳು 2019 ರವರೆಗೆ ಹೆಣಿಗೆ ಕೆಲಸಗಾರರು ಎಷ್ಟು ಯಂತ್ರಗಳನ್ನು ನಿರ್ವಹಣೆ ಮಾಡಬೇಕೆಂಬ ಸೂಚನೆಯ ಅನುಪಸ್ಥಿತಿಯ ಕಾರಣ, 2020 ರ ಮೊದಲು ಕಾರ್ಮಿಕರ ನೇಮಕಾತಿ / ಒಪ್ಪಂದ ಪತ್ರಗಳಲ್ಲಿ ಇವೇ ಮೇಲಿನ ಅಂಶಗಳ ಉಲ್ಲೇಖವಿಲ್ಲದಿರುವುದು, 2011 ರಿಂದ ಒಟ್ಟು ಯಂತ್ರಗಳು ಮತ್ತು ಕಾರ್ಮಿಕರ ವರ್ಷವಾರು ವಿವರಗಳನ್ನು ತನಿಖಾ ತಂಡವು ಕೇಳಿದ ನಂತರವೂ ಮ್ಯಾನೇಜ್ಮೆಂಟ್ ನಿರಾಕರಿಸಿರುವುದು,
ಈ ವಿಷಯದ ಕುರಿತು ಕೆಲಸ ಸಮಿತಿ ಸಭೆಗಳಲ್ಲಿ ಯಾವುದೇ ಚರ್ಚೆ / ನಿರ್ಣಯದ ಅನುಪಸ್ಥಿತಿಯಿಂದ ಮತ್ತು ಹೆಚ್ಚಿನ ಸಂಖ್ಯೆಯ ಕಾರ್ಮಿಕರು ಆಫ್‌ಸೈಟ್‌ನಲ್ಲಿ ಹಂಚಿಕೊಂಡಿರುವುದರಿಂದ, 14 ಅಕ್ಟೋಬರ್ 2019 ರ ವರೆಗೆ
ಯಾವುದೇ ಲಿಖಿತ ಸೂಚನೆ / ಸುತ್ತೋಲೆ ಇಲ್ಲದೆ, ಯಾವುದೇ ಚರ್ಚೆಗಳಿಲ್ಲದೆ ಅಥವಾ ಯಾವುದೇ ಹೆಚ್ಚುವರಿ ಪರಿಹಾರ / ಪ್ರೋತ್ಸಾಹಧನ / ವೇತನವಿಲ್ಲದೆ ಕಾರ್ಮಿಕರು ಅಥವಾ ಕೆಲಸ ಸಮಿತಿಯ ಸದಸ್ಯರನ್ನು ಒಳಗೊಳ್ಳದೆ, ಮತ್ತು ಕಾರ್ಖಾನೆಯನ್ನು ತೊರೆದ ಹೆಣಿಗೆ ವಿಭಾಗದ ಹಳೆಯ ಕಾರ್ಮಿಕರು ಈಗ 10 ಯಂತ್ರಗಳಲ್ಲಿ ಕೆಲಸ ಮಾಡಲು ಮತ್ತು ಕಾರ್ಖಾನೆಯಲ್ಲಿ ತಮ್ಮ ಕರ್ತವ್ಯಕ್ಕೆ ಸೇರಲು ನಿರಾಕರಿಸಿದವರು. ಇದೆಲ್ಲವನ್ನು ಪರಿಶೀಲಿಸಿದ ಮೇಲೆ ಪರಿಸಮಾಪ್ತಿ ಏನೆಂದರೆ, ಕಾರ್ಖಾನೆಯ ಆರಂಭದಿಂದಲೂ 5 ಯಂತ್ರಗಳಲ್ಲಿ ಕೆಲಸ ಮಾಡುವುದು ಒಂದು ಅಲಿಖಿತ ರೂಡಿಯಾಗಿದೆ ಎಂದು ತೀರ್ಮಾನಿಸಲಾಯಿತು ಮತ್ತು ಕಾರ್ಮಿಕರನ್ನು ವಾಸ್ತವವಾಗಿ 10 ಯಂತ್ರಗಳಲ್ಲಿ ಕೆಲಸ ಮಾಡಲು ಒತ್ತಾಯಿಸಲಾಯಿತು.

ಶಿಫಾರಸ್ಸುಗಳು :

ಪ್ರತಿ ಆಪರೇಟರ್‌ಗೆ ಯಂತ್ರಗಳ ಸಂಖ್ಯೆ ಮತ್ತು ಕಾರ್ಮಿಕರಿಗೆ ಲಿಖಿತ ಸಂವಹನದ ಬಗ್ಗೆ ಸ್ಪಷ್ಟ ನೀತಿಯ ಸೂತ್ರೀಕರಣ: ಉತ್ಪನ್ನದ ವಿಧದ ಪ್ರಕಾರ, ಯಂತ್ರದ ಪ್ರೋಗ್ರಾಮಿಂಗ್ ಪ್ರಕಾರ, ಉತ್ಪಾದನಾ ಯೋಜನೆ ಮತ್ತು ಕಾರ್ಮಿಕರ ಸಾಮರ್ಥ್ಯದ ಆಧಾರದ ಮೇಲೆ ಆಪರೇಟರ್‌ಗಳು ಕೆಲಸ ಮಾಡಬೇಕಾದ ಯಂತ್ರಗಳ ಸಂಖ್ಯೆಯ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಕುರಿತು ಸ್ಪಷ್ಟವಾದ, ಲಿಖಿತ ನೀತಿಯನ್ನು ಅಭಿವೃದ್ಧಿಪಡಿಸಲು ಶಿಫಾರಸು ಮಾಡಲಾಗಿದೆ. ಕಾರ್ಮಿಕರಿಂದ ನಿರ್ವಹಿಸಲ್ಪಡುವ ಹೆಣಿಗೆ ಯಂತ್ರಗಳ ಸಂಖ್ಯೆಯಲ್ಲಿ ಲಿಖಿತ ಮತ್ತು ಅನುಮೋದಿತ "ರೂಢಿಗಳು" ಅನುಮೋದಿತ / ಸಹಿ ಮಾಡಿದ ಕಂಪನಿ ನೀತಿಗಳು ಮತ್ತು

ಕಾರ್ಯವಿಧಾನಗಳ ಭಾಗವಾಗಿರಬೇಕು ಮತ್ತು ಲಿಖಿತ ಮಾನದಂಡಗಳಲ್ಲಿ ಯಾವುದೇ ಬದಲಾವಣೆಯನ್ನು ಜವಾಬ್ದಾರಿಯುತ ಅಧಿಕಾರಿಗಳಿಂದ ಅನುಮೋದನೆ ಪಡೆದಿರಬೇಕು ಮತ್ತು ಬದಲಾಗುತ್ತಿರುವ ರೂಢಿಗಳನ್ನು ಮತ್ತು ಬದಲಾದ ನಿರ್ಧಾರವನ್ನು ಕಾರ್ಮಿಕರಿಗೆ ತಿಳಿಸಬೇಕು ಮತ್ತು ಅದೇ ರೀತಿ ಕಾರ್ಮಿಕರ ಯಾವುದೇ ಪ್ರತಿಕ್ರಿಯೆಗಳು / ಉತ್ತರಗಳಿದ್ದರೆ, ಕಾರ್ಖಾನೆಯ ಮ್ಯಾನೇಜ್ಮೆಂಟ್ ಇವನ್ನು ನಿರ್ವಹಿಸಬೇಕಾಗುತ್ತದೆ. ಅಂತಹ ವಿಷಯಗಳನ್ನು ಸಂಬಂಧಿತ ಸಮಿತಿ ಸಭೆಗಳಲ್ಲಿ, ವಿಶೇಷವಾಗಿ ಕಾರ್ಯ ಸಮಿತಿಯಲ್ಲಿ ಚರ್ಚಿಸಬೇಕು ಮತ್ತು ಅದಕ್ಕೆ ಅನುಗುಣವಾಗಿ ದಾಖಲಿಸಬೇಕು.

ಕಾರ್ಮಿಕರನ್ನು ಪಾರದರ್ಶಕ ಮತ್ತು ಅವರನ್ನು ಒಳಗೊಳ್ಳುವ ಚರ್ಚೆಗಳಿಲ್ಲದೆ, ಹೆಚ್ಚುವರಿ ಹೆಣಿಗೆ ಯಂತ್ರಗಳಲ್ಲಿ ಕಾರ್ಯನಿರ್ವಹಿಸಲು ಕೆಲಸಗಾರರನ್ನು ಎಂದಿಗೂ "ಒತ್ತಡ ಹೇರುವಂತಿಲ್ಲ" ಮತ್ತು ಯಂತ್ರಗಳ ಸಂಖ್ಯೆಯನ್ನು ಹೆಚ್ಚಿಸಲು ನಿರ್ಧರಿಸಿದಾಗ ಕಾರ್ಮಿಕರ ಆರೋಗ್ಯ, ಸುರಕ್ಷತೆ ಮತ್ತು ಕೆಲಸದ ಸಮಯ ಮತ್ತು ಉತ್ಪನ್ನದ ಗುಣಮಟ್ಟದ ಮೇಲೆ ಆಗುವ ಪರಿಣಾಮಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕು.

ಕೆಲಸಕ್ಕೆ ಸೇರಿಕೊಳ್ಳುವ ಸಮಯದಲ್ಲಿ ಮತ್ತು ಇಂಡಕ್ಷನ್ ಸಂದರ್ಭದಲ್ಲಿ ಸ್ಪಷ್ಟವಾಗಿ ಕಾರ್ಮಿಕರಿಗೆ ಈ ಮೇಲಿನ ಅಂಶಗಳನ್ನು ಸ್ಪಷ್ಟವಾಗಿ ವಿವರಿಸಬೇಕು. ಯಂತ್ರಗಳ ಸಂಖ್ಯೆಯಲ್ಲಿ ಯಾವುದೇ ಬದಲಾವಣೆಯಾದಾಗ, ಅದನ್ನು ಲಿಖಿತವಾಗಿ ತಿಳಿಸಬೇಕು ಮತ್ತು ಅಂತಹ ಬದಲಾವಣೆಗಳಿಗೆ ಏನು ಕಾರಣಗಳೆಂದು ಕಾರ್ಮಿಕರಿಗೆ ವಿವರಿಸಬೇಕು. ಕಾರ್ಮಿಕರು ಎತ್ತುವ ಯಾವುದೇ ಕಾಳಜಿಗಳನ್ನು ಚರ್ಚಿಸಬೇಕು ಮತ್ತು ಬಗೆಹರಿಸಿಕೊಳ್ಳಬೇಕು.

4.2. ವೇತನ ಮತ್ತು ಬೆನೆಫಿಟ್ಗಳು

ಆರೋಪ: ಕಳೆದ ಮೂರು ವರ್ಷಗಳಿಂದ ವೇತನದಲ್ಲಿ ಯಾವುದೇ ಹೆಚ್ಚಳವಿಲ್ಲ.

- **ಮ್ಯಾನೇಜ್ಮೆಂಟ್ ಜೊತೆಗಿನ ಚರ್ಚೆಯ ನಂತರ ಹೊರಹೊಮ್ಮಿದ ತನಿಖಾ ಫಲಿತಾಂಶ:** ತನಿಖೆಯ ಸಮಯದಲ್ಲಿ, ಆಡಳಿತವು ಮೌಖಿಕವಾಗಿ ಹಂಚಿಕೊಂಡಿದ್ದೇನೆಂದರೆ, 2017-18 ರಿಂದ 2019-20ರ ಅವಧಿಯಲ್ಲಿ ವೇತನದಲ್ಲಿ ಯಾವುದೇ ವಾರ್ಷಿಕ ಹೆಚ್ಚಳವಿಲ್ಲ (ವೇತನದ ಜೊತೆಗೆ, ಇದು ರಾಜ್ಯ ಸರ್ಕಾರವು ಘೋಷಿಸುತ್ತಿದ್ದ ಕನಿಷ್ಠ ವೇತನಕ್ಕಿಂತ ಹೆಚ್ಚಿರುತ್ತಿತ್ತು) ಆದಾಗ್ಯೂ, ನಂತರ ಅವರು ಹೆಚ್ಚಳವನ್ನು ಜುಲೈ 2018 ರವರೆಗೆ ಮತ್ತು ನಂತರ ಹೆಚ್ಚುವರಿ ವಾರ್ಷಿಕ ಇನ್ಕ್ರಿಮೆಂಟ್ ನಿಲ್ಲಿಸಲಾಯಿತು ಎಂದು ಹಂಚಿಕೊಂಡಿದ್ದಾರೆ. ಆರಂಭದಿಂದಲೂ (2011) ವಾರ್ಷಿಕ ವೇತನ ಹೆಚ್ಚಳವು ಕಾರ್ಖಾನೆಯಲ್ಲಿ ಚಾಲ್ತಿಯಲ್ಲಿತ್ತು ಮತ್ತು ನಂತರ ಅದನ್ನು ನಿಲ್ಲಿಸಲಾಯಿತು ಎಂದು ಅವರು ಹಂಚಿಕೊಂಡರು. , ಅವರು ರಾಜ್ಯ ಸರ್ಕಾರವು ನಿಗದಿಪಡಿಸಿದ ಕನಿಷ್ಠ ವೇತನಕ್ಕಿಂತ ಹೆಚ್ಚಿನದನ್ನು ಪಾವತಿಸುತ್ತಿರುವುದರಿಂದ ಅವರು ಹಂಚಿಕೊಂಡರು, ಹೀಗಾಗಿ ಯಾವುದೇ ಹೆಚ್ಚುವರಿ ಇನ್ಕ್ರಿಮೆಂಟ್ ನೀಡುವುದು ಕಾನೂನುಬದ್ಧವಾಗಿ ಕಡ್ಡಾಯವಲ್ಲ, ಆದ್ದರಿಂದ ಅಭ್ಯಾಸವನ್ನು ನಿಲ್ಲಿಸಲಾಯಿತು ಎಂದರು .ಮ್ಯಾನೇಜ್ಮೆಂಟ್ ಕಾರ್ಮಿಕರ ವೇತನವು ಕನಿಷ್ಠ ವೇತನಕ್ಕಿಂತ ಹೆಚ್ಚಾಗಿದ್ದರೆ ಅವರು ಇನ್ಕ್ರಿಮೆಂಟ್ ಅನ್ನು ಪಾವತಿಸಬೇಕಾಗಿಲ್ಲ ಎಂದು ಹೇಳುತ್ತಲೇ ಇದ್ದರು, ಆದರೆ 2011 ರಿಂದ ಅದನ್ನು ನಿಲ್ಲಿಸುವವರೆಗೂ ಅವರು ಇದೇ ನಿಯಮ ಜಾರಿಯಲ್ಲಿದ್ದರೂ ಸಹ ಹೆಚ್ಚಳ ಇನ್ಕ್ರಿಮೆಂಟ್ ನೀಡುವ ಪರಿಪಾಠ ಅಳವಡಿಸಿಕೊಂಡಿದ್ದರು ಎಂದು ಒಪ್ಪಿಕೊಂಡರು.

- **ದಾಖಲೆ ಪರಿಷ್ಕರಣೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ಕಾರ್ಖಾನೆಯ ವೇತನ ದಾಖಲೆಗಳ ಪ್ರಕಾರ, ಕಾರ್ಖಾನೆಯು ಕಾನೂನುಬದ್ಧವಾಗಿ ನಿಗದಿಪಡಿಸಿದ ರಾಜ್ಯ ಸರ್ಕಾರದ ಕನಿಷ್ಠ ವೇತನಕ್ಕಿಂತ ಹೆಚ್ಚಿನ ವೇತನವನ್ನು ಪಾವತಿಸುತ್ತಿ(ತ್ತು)ರುವುದು ದೃಢಪಟ್ಟಿದೆ. ಫ್ಯಾಕ್ಟರಿ ಸಂಭಾವನೆ ನೀತಿಯು ಸಹ ಹೇಳುತ್ತದೆ, "ಕಂಪನಿಯು ತನ್ನ ಯಾವುದೇ ಘಟಕಗಳಲ್ಲಿ ನೇಮಕಗೊಂಡ ಉದ್ಯೋಗಿಗಳಿಗೆ ಚಾಲ್ತಿಯಲ್ಲಿರುವ ಕನಿಷ್ಠ ವೇತನಕ್ಕಿಂತ ಹೆಚ್ಚು ಪಾವತಿಸುವ ನೀತಿಯನ್ನು ಅಳವಡಿಸಿಕೊಂಡಿದೆ". ಜೊತೆಗೆ, ಕಾರ್ಮಿಕರು 2011 ರಿಂದ 2017/2018 ರಲ್ಲಿ ನಿಲ್ಲಿಸುವವರೆಗೆ 2011 ರಿಂದ ಪ್ರತಿ ವರ್ಷವೂ ಇನ್ಕ್ರಿಮೆಂಟ್ ಪಡೆಯುತ್ತಿದ್ದರು. 2017 ರ ವರೆಗಿನ ವಾರ್ಷಿಕ ಇನ್ಕ್ರಿಮೆಂಟ್ ತೋರಿಸುವ ಪೇ ಸ್ಲಿಪ್‌ಗಳನ್ನು ಸಹ ಕಾರ್ಮಿಕರು ಆಫ್‌ಸೈಟ್‌ನಲ್ಲಿ ತೋರಿಸಿದರು. ಆದಾಗ್ಯೂ, ವೇತನದ ದಾಖಲೆಗಳಿಂದ ನಿಜವಾದ ಸಮಯವು ಸ್ಪಷ್ಟವಾಗಿಲ್ಲ. ಕಾರ್ಖಾನೆಯು ತನ್ನ ಸ್ಥಾಯಿ ಆದೇಶದ ಇನ್‌ಕ್ರಿಮೆಂಟ್ ಕ್ಲಾಸ್ ನಲ್ಲಿ (11. ಎ) "ಇನ್ಕ್ರಿಮೆಂಟ್ ಯಾಂತ್ರಿಕವಾಗಿರದೆ, ಕಾರ್ಮಿಕರ ಕೌಶಲ್ಯ, ಹಾಜರಾತಿ ಮತ್ತು ನಡವಳಿಕೆಯ ಆಧಾರದ ಮೇಲೆ ಗಳಿಸಲ್ಪಡಬೇಕು" ಎಂದು ಹೇಳುತ್ತದೆ, ಆದರೆ ಮ್ಯಾನೇಜ್ಮೆಂಟ್ ಯಾವುದೇ ಕಾರ್ಯಕ್ಷಮತೆಯ ಮೌಲ್ಯಮಾಪನವನ್ನು ನಡೆಸಲಿಲ್ಲ ಅಥವಾ ಯಾವುದೇ ಮಾನ್ಯತೆಯನ್ನು ನೀಡಲಿಲ್ಲ ಮತ್ತೂ ಈ ಹಿಂದೆ ಪ್ರಮಾಣಿತ ಅಭ್ಯಾಸವಾಗಿದ್ದ ಯಾವುದೇ ಕಾರ್ಮಿಕರಿಗೆ ಇನ್ಕ್ರಿಮೆಂಟ್ ನೀಡದಿರುವುದಕ್ಕೆ ಲಿಖಿತ ಕಾರಣಗಳು ನೀಡಿಲ್ಲ . ವಾರ್ಷಿಕ ಇನ್ಕ್ರಿಮೆಂಟ್ ಅಭ್ಯಾಸವನ್ನು ಇದ್ದಕ್ಕಿದ್ದಂತೆ ನಿಲ್ಲಿಸಿದ ಮೇಲೆ ಯಾವುದೇ ಸುತ್ತೋಲೆ/ಸಂವಹನ/ನೋಟೀಸ್ ಮೂಲಕ ಕಂಡುಬಂದಿಲ್ಲ ಮತ್ತು ಕಾರ್ಯ ಸಮಿತಿ ರಿಜಿಸ್ಟರ್‌ನಲ್ಲಿ ಯಾವುದೇ ಸಭೆಯ ನಡಾವಳಿಗಳಲ್ಲೂ ಕಂಡುಬಂದಿಲ್ಲ.

- **ಕಾರ್ಮಿಕರ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶಗಳು:** ಕಾರ್ಮಿಕರ ವರಸೆ ಪ್ರಕಾರ, ವಾರ್ಷಿಕ ಇನ್ಕ್ರಿಮೆಂಟ್ 2017 ನೇ ವರ್ಷದಿಂದಲೇ ನಿಂತುಹೋಯಿತು. ಆ ಸಂದರ್ಭದಲ್ಲಿ ಸಹ, ಯಾವುದೇ ಕಾರ್ಮಿಕರನ್ನು ಒಳಗೊಳ್ಳಲಿಲ್ಲ, ಮತ್ತು ಸರಿಯಾದ ಸಂವಹನ ಇರಲಿಲ್ಲ. ಇಂಕ್ರಿಮೆಂಟ್ ಕಾರ್ಖಾನೆಯ ಪ್ರಮಾಣಿತ ವಾರ್ಷಿಕ ಅಭ್ಯಾಸವಾಗಿತ್ತು ಮತ್ತು ಕಾರ್ಮಿಕರು ಈ ಪರಿಪಾಠಕ್ಕೆ ಒಗ್ಗಿಹೋಗಿದ್ದರು, ಆದರೆ ಅದನ್ನು 2017 ರಿಂದ

(ಕಾರ್ಮಿಕರ ವರ್ಷನ್ ಪ್ರಕಾರ) /2018 (ಮ್ಯಾನೇಜ್ಮೆಂಟ್ ನ ಇತ್ತೀಚಿನ ವರ್ಷನ್ ಪ್ರಕಾರ) ಹಠಾತ್ತನೆ ನಿಲ್ಲಿಸಲಾಯಿತು. ಕಾರ್ಯ ಸಮಿತಿ ಸಭೆ ನಡಾವಳಿಗಳು ಈ ಕುರಿತು ಯಾವುದೇ ಚರ್ಚೆಗಳನ್ನು ತೋರಿಸಲಿಲ್ಲ. ನಿಲ್ಲಿಸಿದ್ದಕ್ಕೆ ಕಾರಣಗಳನ್ನು ಸಹ ಕಾರ್ಮಿಕರಿಗೆ ಸ್ಪಷ್ಟವಾಗಿ ತಿಳಿಸಲಾಗಿಲ್ಲ.

2017 ರಿಂದ ಕಾರ್ಮಿಕರು ಮೇಲ್ವಿಚಾರಕರು ಮತ್ತು ಎಚ್ ಆರ್ ಸಿಬ್ಬಂದಿಯನ್ನು ತಮ್ಮ ಇನ್ಕ್ರಿಮೆಂಟ್ ನ ವಿನಂತಿಯೊಂದಿಗೆ ಹಲವಾರು ಬಾರಿ ಸಂಪರ್ಕಿಸಲು ಪ್ರಾರಂಭಿಸಿದರು ಆದರೆ ಮ್ಯಾನೇಜ್ಮೆಂಟ್ ಕಾರ್ಮಿಕರಿಂದ ಮೌಖಿಕವಾಗಿ ಮಾಡಿದ ಇನ್ಕ್ರಿಮೆಂಟ್ ವಿನಂತಿಯನ್ನು ತಳ್ಳಿಹಾಕುತ್ತಲೇ ಬಂದಿತು. ಕಂಪನಿಯು ಈಗ ನಷ್ಟದಲ್ಲಿದೆ, ಹಾಗಾಗಿ ಮುಂಬರುವ ದಿನಗಳಲ್ಲಿ ಇನ್ಕ್ರಿಮೆಂಟ್ ನೀಡುತ್ತೇವೆಂದು ಕಾರ್ಮಿಕರಿಗೆ ಮೌಖಿಕವಾಗಿ ಭರವಸೆ ನೀಡಲಾಯಿತು ಆದರೆ ಇದು ನಿಜವಾಗಿ 2017[6] ರಿಂದ ಸಂಭವಿಸಿಲ್ಲ.

6 ವಿಎಫ್‌ಸಿ ಮೂಲಕ ಒದಗಿಸಿದ ಡಾಕ್ಯುಮೆಂಟ್ ಅಕ್ಟೋಬರ್ 2019 ರ ಘಟನೆಯ ನಂತರ ವಜಾಗೊಳಿಸಿದ 3 ಕಾರ್ಮಿಕರನ್ನು 11, 12 ಮತ್ತು 18 ಫೆಬ್ರುವರಿ 2020 ರಂದು ಮರು ನೇಮಕಾತಿ ಮಾಡಿರುವುದು ಮತ್ತು ಹೆಚ್ಚುವರಿ ವೇತನ ನೀಡಿರುವುದು. ದಿನಕ್ಕೆ ರೂ. 462 ಆದಾಗ್ಯೂ, ಇವುಗಳು ಪೇ ಸ್ಲಿಪ್ ಬದಲಾಗಿ ಟರ್ಮಿನೇಷನ್ ಮೊದಲು ಮತ್ತು ನಂತರದ ವೇತನದ ಸ್ಟೇಟ್ಮೆಂಟ್ ಪ್ರತಿಯಾಗಿದೆ. ಇದು ಹೆಣಿಗೆ ವಿಭಾಗದಿಂದ (4 ಹೆಣಿಗೆ ಅಧಿಕಾರಿಗಳು ಮತ್ತು 3 ಹೆಣಿಗೆ ಆಪರೇಟರ್‌ಗಳು) 7 ಕಾರ್ಮಿಕರ ವೇತನದ ಮತ್ತೊಂದು ತುಲನಾತ್ಮಕ ಹೇಳಿಕೆಯನ್ನು ಒದಗಿಸಿದೆ, ಇದು ಮಾರ್ಚ್ 2018 ರವರೆಗೆ ವೇತನ ಹೆಚ್ಚಳವನ್ನು ತೋರಿಸುತ್ತದೆ, ಆದರೆ ಇವುಗಳು ಪೇ ಸ್ಲಿಪ್ಗಳಲ್ಲ ಮತ್ತು ಈ ಸ್ಟೇಟ್ಮೆಂಟ್ ಗಳಿಂದ ಇನ್ಕ್ರಿಮೆಂಟ್ ಆಗಿದೆಯೇ ಎಂಬುದನ್ನು ತೀರ್ಮಾನಿಸಲು ಸಾಧ್ಯವಿಲ್ಲ ಅಥವಾ 2017 ರ ನಂತರ ವಾರ್ಷಿಕ ಇನ್ಕ್ರಿಮೆಂಟ್ ಒದಗಿಸಲಾಗಿದೆಯೇ ಇಲ್ಲವೇ ಎಂದು ತೀರ್ಮಾನಿಸಲಾಗುವುದಿಲ್ಲ.

ಈ ಸಮಸ್ಯೆಗೆ ಸಂಬಂಧಿಸಿದಂತೆ ತಮ್ಮ ದೂರುಗಳನ್ನು ಮ್ಯಾನೇಜ್ಮೆಂಟ್ ಎಲ್ಲಿಯೂ ದಾಖಲಿಸಿಲ್ಲ ಎಂದು, ಇದನ್ನೇ ದೂರುಗಳು ಸೇರಿದಂತೆ/ ಕಂಪ್ಲೇಂಟ್ ರಿಜಿಸ್ಟರ್ ಮತ್ತು ದಾಖಲೆ ಕೂಡ ಕೆಲಸ ಸಮಿತಿಯ ಸಭೆಗಳಲ್ಲಿ ಎಂದಿಗೂ ಚರ್ಚಿಸಿಲ್ಲ ಎಂದು ಸಾಬೀತು ಪಡಿಸುತ್ತದೆ. ಆನ್‌ಸೈಟ್ ಮತ್ತು ಆಫ್‌ಸೈಟ್ ಕಾರ್ಮಿಕರು ಸಹ ಈ ವಿಷಯವನ್ನು ದೃಢಪಡಿಸಿದರು. ಪ್ರತಿಭಟನೆಯನ್ನು ಆರಂಭಿಸಿದ ಕಾರ್ಮಿಕರಿಗೆ ವಾರ್ಷಿಕ ಇನ್ಕ್ರಿಮೆಂಟ್ ನೀಡಿದರೆ, ಅವರು ಬಹುಶಃ ಹಾಗೆ ಮಾಡುವುದಿಲ್ಲ ಎಂದು ಆನ್‌ಸೈಟ್ ಕಾರ್ಮಿಕರು ಹೇಳಿದರು.

- **ಕಾನೂನು ಉಲ್ಲೇಖ:** "ವಾರ್ಷಿಕ ಇನ್ಕ್ರಿಮೆಂಟ್" ಅನ್ನು ಕನಿಷ್ಠ ವೇತನಕ್ಕಿಂತ ಹೆಚ್ಚಾಗಲಿ ಅಥವಾ ಕಡಿಮೆಯಾಗಲಿ (ಓವರ್ ಅಂಡ್ ಅಬೊವ್) ನೀಡುವುದರ ಸಂಬಂಧ ಯಾವುದೇ ಕಾನೂನು ಉಲ್ಲೇಖವಿಲ್ಲ. ಈ ಕೆಳಗಿನ ಕಾಯಿದೆಗಳು / ಕಾನೂನು ನಿಯಮಗಳ ಪ್ರಕಾರ ಕನಿಷ್ಠ ವೇತನವನ್ನು ಪಾವತಿಸುವುದು ಕಡ್ಡಾಯವಾಗಿದೆ:
    1. ಕನಿಷ್ಠ ವೇತನ ಕಾಯಿದೆ 1948: ಸೆಕ್ಷನ್ 12: Minimum Wages Act, 1948 (clc.gov.in)
    2. ಈಗ ಇದು ವೇತನ ಸಂಹಿತೆ 2019 (ಸೆಕ್ಷನ್ 5) ನ ಭಾಗವಾಗಿದೆ (ಇದು ಅಂಗೀಕರಿಸಲ್ಪಟ್ಟಿದೆ ಆದಾಗ್ಯೂ ಇನ್ನೂ ಜಾರಿಗೊಳಿಸಬೇಕಾಗಿದೆ): THE CODE ON WAGES, 2019 No. 29 of 2019.pdf (labour.gov.in)
    3. ಕರ್ನಾಟಕ ರಾಜ್ಯ ಸರ್ಕಾರದ ಕನಿಷ್ಠ ವೇತನ ಅಧಿಸೂಚನೆಗಳು 2016-17, 2017-18, 2018-19, 2019-20 ಮತ್ತು 2020-21ರ

ಪರಿಸಮಾಪ್ತಿ/ತೀರ್ಮಾನ: ಹೆಚ್ಚುವರಿ ವಾರ್ಷಿಕ ಇನ್ಕ್ರಿಮೆಂಟ್ ನಿಲ್ಲಿಸಿದ ನಿಖರವಾದ ವರ್ಷ/ತಿಂಗಳು ಮ್ಯಾನೇಜ್ಮೆಂಟ್ ಮತ್ತು ಕಾರ್ಮಿಕರ ವಿಭಿನ್ನ ವರ್ಷನ್ ಗಳು ಮತ್ತು ಸಾಕಷ್ಟು ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಸ್ಪಷ್ಟವಾಗಿ ಸ್ಥಾಪಿಸಲು ಸಾಧ್ಯವಾಗದಿದ್ದರೂ, ಹೆಚ್ಚುವರಿ ವಾರ್ಷಿಕ ಇನ್ಕ್ರಿಮೆಂಟ್ ನಿಲ್ಲಿಸಲು ಯಾವುದೇ ಕಾನೂನು ಉಲ್ಲಂಘನೆಯಾಗಿಲ್ಲ. ಇತ್ತೀಚಿನ ರಾಜ್ಯ ಸರ್ಕಾರದ ಅಧಿಕೃತ ಅಧಿಸೂಚನೆಯಂತೆ ಕಾನೂನಿಗೆ "ಕನಿಷ್ಠ ವೇತನ" ಪಾವತಿಯ ಆಗಿದ್ದರೆ ಸಾಕು ಮತ್ತು ಕಾರ್ಖಾನೆಯು ಯಾವಾಗಲೂ ಕಾರ್ಮಿಕರಿಗೆ ನಿಯಮಿತ ವೇತನದಂತೆ ಕಾನೂನುಬದ್ಧ ಕನಿಷ್ಠ ವೇತನಕ್ಕಿಂತ ಹೆಚ್ಚು ಪಾವತಿಸುತ್ತಲಿದೆ. ಕಾನೂನುಬದ್ಧವಾಗಿ ಕಾರ್ಮಿಕರು ಯಾವುದೇ ಹೆಚ್ಚುವರಿ ಇನ್ಕ್ರಿಮೆಂಟ್ ಪಡೆಯಲು ಅರ್ಹರಾಗಿರುವುದಿಲ್ಲ.

ಆದಾಗ್ಯೂ, ಅದೇ ಸಮಯದಲ್ಲಿ, ಹೆಚ್ಚುವರಿ ವಾರ್ಷಿಕ ಇನ್ಕ್ರಿಮೆಂಟ್ 2011 ರಿಂದ 2017/18 ರವರೆಗೆ ಕಾರ್ಖಾನೆಯ ಪ್ರಮಾಣಿತ ಅಭ್ಯಾಸವಾಗಿ ಉಳಿದಿದೆ. ಜುಲೈ 2018 ರ ನಂತರ ಸ್ಥಗಿತವನ್ನು ಮ್ಯಾನೇಜ್ಮೆಂಟ್ ಸಹ ಒಪ್ಪಿಕೊಂಡಿತು. ಕಾರ್ಖಾನೆಯು ಆರಂಭದಿಂದಲೂ ವಾರ್ಷಿಕ ಇನ್ಕ್ರಿಮೆಂಟ್ ಅನ್ನು (ಅವರ ನಿಯಮಿತ ವೇತನಕ್ಕಿಂತ ಹೆಚ್ಚಿಗೆ) ವಾಡಿಕೆಯಾದ್ದರಿಂದ, ಕಾರ್ಮಿಕರೆಲ್ಲರೂ ಈ ರೂಢಿಗೆ ಒಗ್ಗಿಹೋಗಿದ್ದರು, ಅದನ್ನು ಇದ್ದಕ್ಕಿದ್ದಂತೆ ನಿಲ್ಲಿಸಲಾಯಿತು. ಕಾರ್ಮಿಕರೊಂದಿಗೆ ಸರಿಯಾದ ಕಾರಣ ನೀಡದಿರುವುದರ ಕೊರತೆ, ಈಗಾಗಲೇ ಕಾನೂನು ಪ್ರಕಾರ ಕನಿಷ್ಠ ವೇತನಕ್ಕಿಂತ ಹೆಚ್ಚಿನದನ್ನು ನೀಡುತ್ತಿದ್ದಾರೆಂದು ಮ್ಯಾನೇಜ್ಮೆಂಟ್ ಸ್ಪಷ್ಟಪಡಿಸುವುದು (ಹೀಗಾಗಿ ಹೆಚ್ಚುವರಿ ಇನ್ಕ್ರಿಮೆಂಟ್ ಕಡ್ಡಾಯವಲ್ಲ) ಮತ್ತು ಕಾರ್ಯ ಸಮಿತಿಯಲ್ಲಿ ಸಮಸ್ಯೆಗಳನ್ನ ಚರ್ಚಿಸದಿರುವುದು ಇಲ್ಲಿನ ಸಮಸ್ಯೆಗೆ ಕಾರಣವಾಯಿತು.

ಶಿಫಾರಸ್ಸುಗಳು :

ಮ್ಯಾನೇಜ್ಮೆಂಟ್ ಮತ್ತು ಕಾರ್ಮಿಕರ ನಡುವಿನ ಸಂವಹನ ಬಲಪಡಿಸುವುದು ಮತ್ತು ಸಂವಹನ ಗಟ್ಟಿಗೊಳಿಸುವುದು: ಕಾರ್ಮಿಕರ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ನಿರ್ಣಾಯಕ ನಿರ್ಧಾರಗಳ ಮೇಲೆ ಕಾರ್ಮಿಕರು ಮತ್ತು ಸಮಿತಿಯ ಸದಸ್ಯರೊಂದಿಗೆ ಪ್ರಬಲವಾದ ಸಂವಹನ ಮತ್ತು ಒಳಗೊಳ್ಳುವಿಕೆಯ ಪ್ರಕ್ರಿಯೆಯನ್ನು ಮ್ಯಾನೇಜ್ಮೆಂಟ್ ಪ್ರೋತ್ಸಾಹಿಸಬೇಕು ಮತ್ತು ಖಚಿತಪಡಿಸಿಕೊಳ್ಳಬೇಕು. ಯಾವುದೇ ನಿರ್ಧಾರವನ್ನು ಥಟ್ಟನೆ ತೆಗೆದುಕೊಳ್ಳಬಾರದು, ವಿಶೇಷವಾಗಿ ವರ್ಷಗಳಿಂದ ಅನುಸರಿಸುತ್ತಿರುವ ಅಭ್ಯಾಸಗಳಿಗೆ ಸಂಬಂಧಿಸಿದಂತೆ. ನಿರ್ಧಾರಗಳಲ್ಲಿ ಇಂತಹ ಬದಲಾವಣೆಗಳಿಗೆ ನಿಜವಾದ ಕಾರಣಗಳನ್ನು

ಕಾರ್ಮಿಕರಿಗೆ ಸ್ಪಷ್ಟವಾಗಿ ತಿಳಿಸಬೇಕು. ಯಾವುದೇ ನಿರ್ಣಾಯಕ ವಿಷಯದ ಮೇಲೆ ನಿರ್ಧಾರ ಬದಲಾವಣೆಗಳನ್ನು ಸಹ ಸಮಿತಿಯ ಮಟ್ಟದಲ್ಲಿ ಚರ್ಚಿಸಬೇಕು ಮತ್ತು ದಾಖಲಿಸಬೇಕು.

ಸಮರ್ಪಕ ಮತ್ತು ಪಾರದರ್ಶಕ ಸಂವಹನಗಳ ಕೊರತೆ ಮತ್ತು ಮ್ಯಾನೇಜ್ಮೆಂಟ್ ಮತ್ತು ಕಾರ್ಮಿಕರ ನಡುವಿನ ಒಳಗೊಳ್ಳದಿರುವಿಕೆ ಸಮಸ್ಯೆಗಳಿಗೆ ಮೂಲ ಕಾರಣವೆಂದು ತನಿಖೆಯಿಂದ ಕಂಡುಬಂದಿದೆ. ಕೆಲಸದ ವ್ಯವಸ್ಥೆಗಳು, ವಾತಾವರಣ ಮತ್ತು ಕಾರ್ಮಿಕರ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ನಿರ್ಣಾಯಕ ನಿರ್ಧಾರಗಳಿಗೆ ಸಂಬಂಧಿಸಿದಂತೆ ಇಬ್ಬರ ನಡುವೆ ನಡೆಯುತ್ತಿರುವ, ಪಾರದರ್ಶಕ ಮತ್ತು ಸ್ಪಷ್ಟ ಸಂವಹನಕ್ಕಾಗಿ ಒಂದು ಬಲವಾದ ಸಂವಹನ ಕಾರ್ಯವಿಧಾನ ಮತ್ತು ಸಂಸ್ಕೃತಿಯನ್ನು ಕಾರ್ಖಾನೆಯೊಳಗೆ ನಿರ್ಮಿಸಬೇಕಾಗಿದೆ. ಆಡಳಿತ ಮತ್ತು ಕಾರ್ಮಿಕರ ನಡುವಿನ ನೇರ ಸಂವಹನಗಳ ಜೊತೆಗೆ, ಕಾರ್ಖಾನೆಯಲ್ಲಿ ರಚಿಸಲಾದ ಸಮಿತಿಗಳು ಸಂವಹನ ಅಂತರವನ್ನು ಕಡಿಮೆ ಮಾಡುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ. ಸಂವಹನವನ್ನು ಗಟ್ಟಿಗೊಳಿಸಲು ಕೆಲಸದ ನೇಮಕಾತಿ ಸಮಯದಲ್ಲಿ ನೀಡುವ ಇಂಡಕ್ಷನ್ ಟ್ರೈನಿಂಗ್, ಫ್ಲೋರ್ ಮೀಟಿಂಗ್ಗಳು ಮತ್ತು ಘೋಷಣೆಗಳು, ವಿವಿಧ ಸಮಿತಿಗಳ ಕಾರ್ಮಿಕರ ಪ್ರತಿನಿಧಿಗಳ ಮೂಲಕ ಸಂವಹನ, ಲಿಖಿತ ಸೂಚನೆಗಳು / ದಾಖಲೆಗಳು / ಸಾಮಗ್ರಿಗಳು ಇತ್ಯಾದಿಗಳು ಯಾವುದೇ ನಿರ್ಣಾಯಕ ನಿರ್ಧಾರವನ್ನು ತೆಗೆದುಕೊಳ್ಳಲು ಬಲವಾಗಿ ಸಲಹೆ ನೀಡಲಾಗುತ್ತದೆ ಮತ್ತು ಅಂತಹ ಎಲ್ಲಾ ಸಂವಹನ ಮತ್ತು ಒಳಗೊಳ್ಳುವಿಕೆಯ ಪುರಾವೆ / ಸಾಕ್ಷ್ಯವನ್ನು ಸಹ ನಿರ್ವಹಿಸಬೇಕಾಗುತ್ತದೆ. ಒಟ್ಟಾರೆಯಾಗಿ, ಕೆಲಸಗಾರರನ್ನು ತೊಡಗಿಸಿಕೊಳ್ಳುವ ಚಾನೆಲ್‌ಗಳು, ಪ್ಲಾಟ್‌ಫಾರ್ಮ್ ಮತ್ತು ಕಾರ್ಯವಿಧಾನಗಳು ತುಂಬಾ ದುರ್ಬಲವಾಗಿ ಉಳಿದಿವೆ ಮತ್ತು ಹೀಗಾಗಿ ಮ್ಯಾನೇಜ್ಮೆಂಟ್ ಕಡೆಯಿಂದ ಸಕ್ರಿಯ ಪಾತ್ರವಹಿಸಿ ಭವಿಷ್ಯದಲ್ಲಿ ಈ ಮಾರ್ಗವನ್ನು ಬಲಪಡಿಸಬೇಕಾಗಿದೆ.

4.3. ಕೆಲಸದ ಗಂಟೆಗಳು

ಆರೋಪ: ಕೆಲಸಗಾರರಿಗೆ ಎಲ್ಲಾ ಭಾನುವಾರಗಳಲ್ಲೂ ಕೆಲಸ ಮಾಡಲು ಹೇಳಲಾಯಿತು.

► **ಮ್ಯಾನೇಜ್ಮೆಂಟ್ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ಕಾರ್ಖಾನೆಯ ಆರಂಭದಿಂದ (ಇತ್ತೀಚಿನ ಬದಲಾವಣೆಗಳವರೆಗೆ) ಭಾನುವಾರ ಯಾವಾಗಲೂ "ವಾರದ ರಜೆ" ಎಂದು ಮ್ಯಾನೇಜ್‌ಮೆಂಟ್ ದೃಢಪಡಿಸಿದೆ. ಕಾರ್ಮಿಕರನ್ನು "ಎಲ್ಲಾ ಭಾನುವಾರಗಳಂದು ಕೆಲಸ ಮಾಡಲು" ಕೇಳಲಾಗಿದೆ ಎಂಬ ಆರೋಪವನ್ನು ಅವರು ನಿರಾಕರಿಸಿದರು, ಆದರೆ ಕಾರ್ಖಾನೆಗಳ ಕಾಯಿದೆಯ ಅಡಿಯಲ್ಲಿ ಕಾನೂನು ನಿಬಂಧನೆಗಳ ಪ್ರಕಾರ ಒಂದೇ ದಿನವಲ್ಲದೆ ಬಾರಿ ಬಾರಿಯಾಗಿ ರಜಾದಿನ ನೀಡುವ ವ್ಯವಸ್ಥೆಯನ್ನು ಪ್ರಾರಂಭಿಸಲು ಅವರು ಬಯಸಿದ್ದರು ಎಂದು ಒಪ್ಪಿಕೊಂಡರು, ಹೆಣಿಗೆ ಯಂತ್ರಗಳನ್ನು ವಾರದಲ್ಲಿ 7 ದಿನಗಳೂ ಕಾರ್ಯನಿರ್ವಹಿಸುವ ಸಲುವಾಗಿ ಈ ರೀತಿಯಾಗಿ ರಜೆಯ ವ್ಯವಸ್ಥೆಯನ್ನು ಪರಿವರ್ತಿಸುವ ನಿರ್ಧಾರವನ್ನು ತೆಗೆದುಕೊಳ್ಳ ಬಯಸಿದರು, ವಾಸ್ತವವಾಗಿ ನಂತರ ಇದನ್ನು ಕಾರ್ಯಗತಗೊಳಿಸಲಿಲ್ಲ.

► **ದಾಖಲೆ ಪರಿಷ್ಕರಣೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ಕಾರ್ಖಾನೆಯ ಪಾಲಿಸಿ ಡಾಕ್ಯುಮೆಂಟ್ ನಿರ್ದಿಷ್ಟವಾಗಿ "ಭಾನುವಾರ" "ವಾರದ ಆಫ್" ದಿನ ಎಂದು ಉಲ್ಲೇಖಿಸುವುದಿಲ್ಲ. ಅದು ಹೇಳುತ್ತದೆ "ಕೆಲಸಗಾರರಿಗೆ ವಾರಕ್ಕೆ ಕನಿಷ್ಠ ಒಂದು ದಿನ ರಜೆ ನೀಡಬೇಕು". ಆದಾಗ್ಯೂ, ಅಕ್ಟೋಬರ್ 8, 2019 ರವರೆಗೆ, ಕಾರ್ಖಾನೆಯ ಅಭ್ಯಾಸದ ಪ್ರಕಾರ ಭಾನುವಾರ ವಾರದ ರಜೆಯ ದಿನವಾಗಿತ್ತು, ಇದನ್ನು ದಾಖಲೆಗಳಿಂದ ದೃಢಪಡಿಸಲಾಗಿದೆ. ಕೇವಲ 5 ಭದ್ರತಾ ಸಿಬ್ಬಂದಿಗಳ ರಜಾ ದಿನವನ್ನು, ಒಂದೇ ದಿನವಲ್ಲದೆ ಬಾರಿ ಬಾರಿಯಾಗಿ ನೀಡುತ್ತಿದ್ದರು. ಕಾರ್ಖಾನೆ ದಾಖಲೆಗಳಲ್ಲಿ ಗಮನಿಸಿದಾಗ ಕಂಡು ಬಂದ ಅಂಶವೆಂದರೆ ಉಳಿದ ಕಾರ್ಮಿಕರು "ಎಲ್ಲಾ ಭಾನುವಾರಗಳು" ಕೆಲಸ ಮಾಡುವ ಯಾವುದೇ ನಿದರ್ಶನಗಳಿಲ್ಲ,

► **ಕಾರ್ಮಿಕರ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶಗಳು:** ಆನ್‌ಸೈಟ್ ಮತ್ತು ಆಫ್‌ಸೈಟ್ ಕಾರ್ಮಿಕರಿಬ್ಬರೂ ಸಹ ಭಾನುವಾರ "ವಾರದ ರಜೆ ದಿನ" ಎಂದು ಕಾರ್ಖಾನೆಯ ಪ್ರಮಾಣಿತ ಅಭ್ಯಾಸವಾಗಿ ಸೆಪ್ಟೆಂಬರ್ 2019 ರವರೆಗೆ ಇತ್ತೆಂದು ದೃಢ.ಪಡಿಸಿದರು. ಆದಾಗ್ಯೂ, ಅಕ್ಟೋಬರ್ 2019 ರಲ್ಲಿ, ಮ್ಯಾನೇಜ್ಮೆಂಟ್ ಹೆಣಿಗೆ ವಿಭಾಗದ ನೋಟೀಸ್ ಬೋರ್ಡ್‌ನಲ್ಲಿ ಸುತ್ತೋಲೆಯ ಮೂಲಕ, ಹೆಣಿಗೆ ನಿರ್ವಾಹಕರಿಗೆ ಮಾಹಿತಿ ನೀಡಿದ್ದೇನೆಂದರೆ, 14 ಅಕ್ಟೋಬರ್ 2019 (ದಸರಾ ರಜಾದಿನಗಳ ನಂತರ) ಕಾರ್ಖಾನೆಗಳ ಕಾಯ್ದೆ, 1948 ರ ಪ್ರಕಾರ, ಒಂದೇ ದಿನವಲ್ಲದೆ ಬಾರಿ ಬಾರಿಯಾಗಿ ರಜಾ ನೀಡುವ (ಸ್ಟ್ಯಾಗ್ಗೆರ್ಡ್ ರಜೆ) ವ್ಯವಸ್ಥೆ ಜಾರಿಯಾಗುತ್ತದೆ, ಹೀಗಾಗಿ ವಿವಿಧ ಕಾರ್ಮಿಕರು ವಾರದ ಬೇರೆ ಬೇರೆ ದಿನಗಳಲ್ಲಿ ವಾರದ ರಜೆ ಪಡೆಯಬೇಕು. ಹೀಗಾಗಿ ಎಲ್ಲಾ ಕಾರ್ಮಿಕರಿಗೆ ಭಾನುವಾರವೇ ಆಗಿರದೆ, ವಾರದಲ್ಲಿ ಯಾವುದಾದರೂ ಒಂದು ದಿನ ಸಂಪೂರ್ಣ ರಜೆ ಸಿಗುತ್ತದೆ,.

ಮೇಲಿನವುಗಳು ಕಾರ್ಖಾನೆಯ ನೀತಿಯಂತೆ ಮತ್ತು ಕಾನೂನುಬದ್ಧವಾಗಿ ಅನುಮತಿಸಿದರೂ, ಕಾರ್ಮಿಕರು ಈ ವ್ಯವಸ್ಥೆಯಲ್ಲಿ ಹೆಚ್ಚಿನ ಉತ್ಪಾದನೆಯ ಅವಧಿಯಲ್ಲಿ ಕೆಲವು ತಿಂಗಳುಗಳ ಕಾಲ ಮಾತ್ರ ಕೆಲಸ ಮಾಡಿದ್ದರು, ಆದರೆ ನಿರಂತರವಾಗಿ ಅಲ್ಲ. ಕಾರ್ಮಿಕರಿಗೆ ಕೆಲವು ತಿಂಗಳುಗಳವರೆಗೆ ಈ ವ್ಯವಸ್ಥೆ ಒಪ್ಪಿತವಾಗಿತ್ತೇ ಹೊರತು, ಅವರಿಗೆ "ಭಾನುವಾರ" ರಜಾದಿನವಾಗಿ ಉಳಿಯಬೇಕೆಂದು ಆಶಿಸಿದರು , ಏಕೆಂದರೆ ಆ ದಿನ ಅವರು ತಮ್ಮ ಕುಟುಂಬಗಳೊಂದಿಗೆ ಸಮಯ ಕಳೆಯಲು ಬಯಸಿದ್ದರು. 2017, 2018 ಅಥವಾ 2019 ರಲ್ಲಿ "ಎಲ್ಲಾ ಭಾನುವಾರಗಳು" ಕೆಲಸ ಮಾಡಲಿಲ್ಲ ಎಂದು ಕಾರ್ಮಿಕರು ಒಪ್ಪಿಕೊಂಡರು ಮತ್ತು "ಎಲ್ಲಾ ಭಾನುವಾರಗಳಲ್ಲಿ" ಕೆಲಸ ಮಾಡುವ ಯಾವುದೇ ನಿದರ್ಶನಗಳಿಲ್ಲ ಎಂದು ದೃಢಪಡಿಸಿದರು.

ಆದಾಗ್ಯೂ, "ಒಂದೇ ದಿನವಲ್ಲದೆ ಹಂತ ಹಂತವಾಗಿ (ಸ್ಟ್ಯಾಗ್ಗೆರ್ಡ್) ರಜಾ ನೀಡುವ ವ್ಯವಸ್ಥೆಯನ್ನು" ಪರಿಚಯಿಸುವ ನಿರ್ಧಾರಕ್ಕೆ ಸಂಬಂಧಿಸಿದಂತೆ, ಮ್ಯಾನೇಜ್‌ಮೆಂಟ್ ಇದ್ದಕ್ಕಿದ್ದಂತೆ ಮಾಹಿತಿಯನ್ನು ಒದಗಿಸಿತು ಮತ್ತು ಈ ನಿರ್ಧಾರ ತೆಗೆದುಕೊಳ್ಳುವಲ್ಲಿ ಯಾವುದೇ ಕಾರ್ಮಿಕರನ್ನು ಒಳಗೊಳ್ಳಲಿಲ್ಲ ಅಥವಾ ಒಪ್ಪಿಗೆ ಪಡೆಯಲಿಲ್ಲ. ವರ್ಕ್ಸ್ ಕಮಿಟಿಗೆ ಕೂಡ ಇದರ ಬಗ್ಗೆ ಯಾವುದೇ ಮಾಹಿತಿ ಇರಲಿಲ್ಲ ಮತ್ತು ಈ ವಿಷಯವನ್ನು ವರ್ಕ್ಸ್ ಕಮಿಟಿಯಲ್ಲಿ ಚರ್ಚಿಸಲಾಗಿಲ್ಲ. ಕಾರ್ಮಿಕರಿಗೆ ತಮ್ಮ ಸಾಪ್ತಾಹಿಕ ರಜೆಯ ಬಗ್ಗೆ ತಿಳಿಸಲು ಹೆಣಿಗೆ ವಿಭಾಗದಲ್ಲಿ ಪೋಸ್ಟ್ ಮಾಡಲಾದ ಶಿಫ್ಟ್ ಚಾರ್ಟ್ ಅನ್ನು ಒದಗಿಸಲಾಗಿದೆ.

► **ಕಾನೂನು ಉಲ್ಲೇಖಗಳು:** ಒಂದೇ ದಿನವಲ್ಲದೆ ಹಂತ ಹಂತವಾಗಿ (ಸ್ಟ್ಯಾಗ್ಗೆರ್ಡ್) ರಜಾ ನೀಡುವ ವ್ಯವಸ್ಥೆಯನ್ನು ಕಾನೂನು ಸಮ್ಮತಿಸುತ್ತದೆ :

1. ಕಾರ್ಖಾನೆ ಕಾಯ್ದೆ 1948: ಸೆಕ್ಷನ್ 52: ಸಾಪ್ತಾಹಿಕ ರಜಾ ದಿನಗಳು: Factories_Act_1948.pdf (labour.gov.in)

ಪರಿಸಮಾಪ್ತಿ/ತೀರ್ಮಾನ: ಕಾರ್ಖಾನೆಯು ಒಂದೇ ದಿನವಲ್ಲದೆ ಹಂತ ಹಂತವಾಗಿ (ಸ್ಟ್ಯಾಗ್ಗೆರ್ಡ್) ರಜಾ ನೀಡುವ ವ್ಯವಸ್ಥೆಯನ್ನು ನಿರಂತರವಾಗಿ ಮತ್ತು ಪ್ರಮಾಣಿತ ಅಭ್ಯಾಸವಾಗಿ ಆರಂಭಿಸಲು ಬಯಸಿದ್ದು ನಿಜ, ಈ ಕಾರಣದಿಂದಾಗಿ ಕೆಲವು ಕಾರ್ಮಿಕರು "ಎಲ್ಲಾ ಭಾನುವಾರ" ಗಳಲ್ಲಿ ಕೆಲಸ ಮಾಡಬೇಕಿತ್ತು ಮತ್ತು ಯಾವುದೇ ದಿನ "ವಾರದ ಆಫ್" ಪಡೆಯಬೇಕಾಯಿತು. ಅಕ್ಟೋಬರ್ 2019 ರಲ್ಲಿ ದಸರಾ ರಜಾದಿನಗಳ ನಂತರ "ಒಂದೇ ದಿನವಲ್ಲದೆ ಹಂತ ಹಂತವಾಗಿ (ಸ್ಟ್ಯಾಗ್ಗೆರ್ಡ್) ರಜಾ ನೀಡುವ ವ್ಯವಸ್ಥೆಯನ್ನು" ಅನುಸರಿಸಲು ಕಾರ್ಮಿಕರಿಗೆ ನಿರ್ದೇಶನ ನೀಡಲಾಯಿತು. ಆದಾಗ್ಯೂ, ಈ ನಿರ್ಧಾರವನ್ನು ಇದ್ದಕ್ಕಿದ್ದಂತೆ ತೆಗೆದುಕೊಳ್ಳಲಾಯಿತು, ಹೀಗಾಗಿ ಕಾರ್ಮಿಕರಿಗೆ ಅಸಮಾಧಾನ ಮತ್ತು ನಿರಾಕರಣೆಗೆ ಕಾರಣವಾಯಿತು. ಕೆಲಸ ಸಮಿತಿಯನ್ನೂ ಒಳಗೊಂಡಂತೆ ಕಾರ್ಮಿಕರ ಜೊತೆ ಅರ್ಥಪೂರ್ಣ ಚರ್ಚೆ , ಸಮಾಲೋಚನೆಗಳು ಮತ್ತು ಸಂವಹನಗಳು ನಡೆಸಲಿಲ್ಲ.

ವಾಸ್ತವವಾಗಿ, ಒಂದೇ ದಿನವಲ್ಲದೆ ಹಂತ ಹಂತವಾಗಿ (ಸ್ಟ್ಯಾಗ್ಗೆರ್ಡ್) ರಜಾ ನೀಡುವ ವ್ಯವಸ್ಥೆಯನ್ನು ಅಕ್ಟೋಬರ್ 2019 ರ ನಂತರ ಪರಿಚಯಿಸಲಾಗಿಲ್ಲ ಮತ್ತು ಭಾನುವಾರದಂದು ವಾರದ ರಜೆ ನೀಡುವ ಹಳೆಯ ಪದ್ಧತಿ ಮುಂದುವರೆಯಿತು. ಇತ್ತೀಚೆಗೆ (ಸುಮಾರು 3 ತಿಂಗಳ ಹಿಂದೆ), ಕಾರ್ಖಾನೆಯು 2 ದಿನಗಳ ವಾರದ ರಜೆಗಳನ್ನು (ಪ್ರತಿ ಶನಿವಾರ ಮತ್ತು ಭಾನುವಾರ) ಪರಿಚಯಿಸಿದೆ ಮತ್ತು ವಾರದಲ್ಲಿ 5 ದಿನ ಕೆಲಸ ಮಾಡಿದೆ, ದಿನಕ್ಕೆ 9.5 ಗಂಟೆಗಳನ್ನು ಕೆಲಸದ ಸಮಯವಾಗಿ, ಅರ್ಧ ಗಂಟೆ ವಿರಾಮ ಸೇರಿದಂತೆ, ಕಾರ್ಖಾನೆ ಕೆಲಸದ ಸಮಯದ ನೀತಿಯ ಪ್ರಕಾರ ಮತ್ತು ಕಾನೂನುಬದ್ಧವಾಗಿ ಅನುಮೋದಿಸದಂತೆ ಕಾರ್ಯ ನಿರ್ವಹಿಸಿದೆ.

ಶಿಫಾರಸ್ಸುಗಳು:

ಕಾರ್ಮಿಕರ ಜೀವನದ ಮೇಲೆ ಪರಿಣಾಮ ಬೀರುವ ಎಲ್ಲಾ ನಿರ್ಣಾಯಕ ನಿರ್ಧಾರಗಳ ಮೇಲೆ ಕಾರ್ಮಿಕರ ಮತ್ತು ಸಮಿತಿಯ ಸದಸ್ಯರೊಂದಿಗೆ ಪ್ರಭಲವಾದ ಸಂವಹನ ಮತ್ತು ಒಳಗೊಳ್ಳುವಿಕೆಯ ಪ್ರಕ್ರಿಯೆಯನ್ನು ಮ್ಯಾನೇಜ್ಮೆಂಟ್ ಪ್ರೋತ್ಸಾಹಿಸಬೇಕು ಮತ್ತು ಖಚಿತಪಡಿಸಿಕೊಳ್ಳಬೇಕು. ಯಾವುದೇ ನಿರ್ಧಾರವನ್ನು ಥಟ್ಟನೆ ತೆಗೆದುಕೊಳ್ಳಬಾರದು, ವಿಶೇಷವಾಗಿ ವರ್ಷಗಳಿಂದ ಅನುಸರಿಸುತ್ತಿರುವ ಅಭ್ಯಾಸಗಳಿಗೆ ಸಂಬಂಧಿಸಿದಂತೆ. ನಿರ್ಧಾರಗಳಲ್ಲಿ ಇಂತಹ ಬದಲಾವಣೆಗಳಿಗೆ ನಿಜವಾದ ಕಾರಣಗಳನ್ನು ಕಾರ್ಮಿಕರಿಗೆ ಸ್ಪಷ್ಟವಾಗಿ ತಿಳಿಸಬೇಕು. ಯಾವುದೇ ನಿರ್ಣಾಯಕ ವಿಷಯದ ಮೇಲೆ ನಿರ್ಧಾರದಲ್ಲಾದ ಬದಲಾವಣೆಗಳನ್ನು ಸಹ ಸಮಿತಿಯ ಮಟ್ಟದಲ್ಲಿ ಚರ್ಚಿಸಬೇಕು ಮತ್ತು ದಾಖಲಿಸಬೇಕು.

4.4 . ವಿಪರೀತ ಕೆಲಸದ ಗಂಟೆಗಳು

ಆರೋಪ: ಅತಿಯಾದ ಕೆಲಸದ ಸಮಯ: ಓವರ್ಟೈಮ್ ಒಂದು ತಿಂಗಳಲ್ಲಿ 150 - 200 ಗಂಟೆಗಳ ಹೆಚ್ಚುವರಿ ತಲುಪಿದೆ. ಅದಕ್ಕೆ ತಕ್ಕಂತೆ ವೇತನ ಮಾತ್ರ ಹೆಚ್ಚಾಗಲಿಲ್ಲ.

► **ಮ್ಯಾನೇಜ್ಮೆಂಟ್ ಜೊತೆಗಿನ ಚರ್ಚೆಯ ನಂತರ ಹೊರಹೊಮ್ಮಿದ ತನಿಖಾ ಫಲಿತಾಂಶ:** ಮ್ಯಾನೇಜ್‌ಮೆಂಟ್ ಆರೋಪವನ್ನು ನಿರಾಕರಿಸಿತು ಮತ್ತು ಇದು ಕಾರ್ಖಾನೆಯಲ್ಲಿ ಎಂದಿಗೂ ಸಂಭವಿಸಿಲ್ಲ ಎಂದು ದೃಢಪಡಿಸಿತು. ಕಾರ್ಖಾನೆಯಲ್ಲಿ ಯಾವುದೇ ಕಾನೂನುಬಾಹಿರ ಓವರ್ಟೈಮ್ ಪರಿಪಾಠವಿಲ್ಲ ಎಂದು ಅವರು ಒತ್ತಿ ಹೇಳಿದರು.

► **ದಾಖಲೆ ಪರಿಷ್ಕರಣೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶ:** ದಾಖಲೆಗಳಿಂದ; ಓವರ್‌ಟೈಮ್ ದಾಖಲೆಗಳು, ಮಸ್ಟರ್ ರೋಲ್ ಮತ್ತು ಪೇ ಸ್ಲಿಪ್‌ಗಳ ಪ್ರಕಾರ ಕಾರ್ಮಿಕರು ತಿಂಗಳಲ್ಲಿ 150 - 200 ಗಂಟೆಗಳ ಕಾಲ ಓವರ್ಟೈಮ್ ಕೆಲಸ ಮಾಡಲಿಲ್ಲ. ಹೆಣಿಗೆ ಆಪರೇಟರ್‌ಗಳು ವಾರದಲ್ಲಿ ಸರಾಸರಿ 2 - 4 ಗಂಟೆಗಳ ಓವರ್‌ಟೈಮ್ ಕೆಲಸ ಮಾಡಿದ್ದಾರೆ, ಆದರೆ ಕಾನೂನುಬದ್ಧವಾಗಿ ವಾರಕ್ಕೆ 12 ಗಂಟೆಗಳ ಓವರ್ಟೈಮ್ ಅನುಮತಿಸಲಾಗಿದೆ. ಕಾರ್ಮಿಕರಿಗೆ ಕೆಲವೊಮ್ಮೆ ಓವರ್ಟೈಮ್ ಮಾಡಲು ಮಾತ್ರ ಕೇಳಲಾಗುತ್ತಿತ್ತೆ ವಿನಃ ಆಗಾಗ್ಗೆ ಅಥವಾ ನಿಯಮಿತವಾಗಿ ಅಲ್ಲ. ಹೀಗಾಗಿ ದಾಖಲೆಗಳ ಪ್ರಕಾರ ಓವರ್ಟೈಮ್ ನ ಯಾವುದೇ ಕಾನೂನು ಉಲ್ಲಂಘನೆಯಾಗಿಲ್ಲ.

► **ಕಾರ್ಮಿಕರ ಜೊತೆಗಿನ ಚರ್ಚೆಯಿಂದ ಹೊರಹೊಮ್ಮಿದ ತನಿಖಾ ಫಲಿತಾಂಶಗಳು:** ಆನ್‌ಸೈಟ್ ಮತ್ತು ಆಫ್‌ಸೈಟ್ ಕಾರ್ಮಿಕರಿಬ್ಬರು 150-200 ಗಂಟೆಗಳ ಓವರ್ಟೈಮ್ ಕೆಲಸ ಮಾಡಲಿಲ್ಲವೆಂದು ದೃಢಪಡಿಸಿದರು ಮತ್ತು ಈ ಆಪಾದನೆಯು ನಿಜವಲ್ಲ ಎಂದು ಹಂಚಿಕೊಂಡರು.

ಆದಾಗ್ಯೂ, ಅಕ್ಟೋಬರ್ 2019 ರ ನಂತರ ಟರ್ಮಿನೇಟ್ ಮಾಡಿದ ಅಥವಾ ರಾಜೀನಾಮೆ ನೀಡಿದ ಕಾರ್ಮಿಕರು ಹಂಚಿಕೊಂಡಿದ್ದೇನೆಂದರೆ, ಕಾಲಕಾಲಕ್ಕೆ (ಸಾಮಾನ್ಯವಾಗಿ ಗರಿಷ್ಠ ಉತ್ಪಾದನೆಯ ಅವಧಿಯಲ್ಲಿ) ಕೆಲಸಗಾರರನ್ನು ಪಂಚ್ ಔಟ್ ಮಾಡಲು ಹೇಳುತ್ತಿದ್ದರು ಮತ್ತು ಡಿಫೆಕ್ಟಿವ್ ಆಗಿರುವ ಬಟ್ಟೆಗಳನ್ನು ಸರಿಪಡಿಸಲು ಅವರನ್ನು ಹೆಣಿಗೆ ಮಹಡಿಗೆ ಕರೆತರಲಾಗುತ್ತಿತ್ತು. ಸರಾಸರಿ 2 ಗಂಟೆಗಳು ಮತ್ತು ವಾರದಲ್ಲಿ 2-3 ಬಾರಿ ಕೆಲಸ ಮಾಡಬೇಕಾಗಿತ್ತು ಮತ್ತು ಕಾಲಕಾಲಕ್ಕೆ ನಡೆದು ಬರುವ ಪರಿಪಾಠವಾಗಿತ್ತು. ಇದು ಮೂರು ಶಿಫ್ಟ್‌ಗಳಿದ್ದಾಗ ಸೆಪ್ಟೆಂಬರ್ 2019 ರವರೆಗೆ ನಡೆಯುತ್ತಿತ್ತು ಮತ್ತು ಸರಿಪಡಿಸುವುದು ಸಹ ಆಪರೇಟರ್‌ನ ಕೆಲಸದ ಭಾಗವಾಗಿತ್ತು. ಕೆಲಸ ಮಾಡಿದ ಹೆಚ್ಚುವರಿ ಗಂಟೆಗಳನ್ನು ದಾಖಲಿಸಲಾಗಿಲ್ಲ ಮತ್ತು ಈ ರಿಪೇರಿ ಮತ್ತು ಸರಿಪಡಿಸುವ ಕೆಲಸಗಳಿಗೆ ಯಾವುದೇ ಹೆಚ್ಚುವರಿ ಸಮಯ ಪಾವತಿ ಮಾಡಲಾಗಿಲ್ಲ, ಕಾರ್ಮಿಕರ ನಿರ್ಲಕ್ಷ್ಯದಿಂದಾಗಿ ದೋಷಗಳು ಉಂಟಾಗಿವೆ ಮತ್ತು ಆದ್ದರಿಂದ ಹೆಚ್ಚುವರಿ ಸಮಯದಲ್ಲಿ ಯಾವುದೇ ಓವರ್ಟೈಮ್ ಇಲ್ಲದೆ ರಿಪೇರಿ/ ಸರಿಪಡಿಸುವ ಜವಾಬ್ದಾರಿಯನ್ನು ಕಾರ್ಮಿಕರೇ ಹೊರಬೇಕೆಂದು ಸಬೂಬು ಹೇಳಿದರು. ಇದು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕರಿಂದ ತನಿಖಾ ತಂಡಕ್ಕೆ ವರದಿ ಮಾಡಲಾದ ಹೊಸ ಆರೋಪವಾಗಿದೆ, ಇದು ಆಪಾದನೆಗಳ ಪಟ್ಟಿಯಲ್ಲಿ ಇರಲಿಲ್ಲ, ಆದರೂ "ಪಾವತಿಸದ ಓವರ್ಟೈಮ್" ಅನ್ನು ಕಾರ್ಮಿಕ ಇಲಾಖೆಗೆ ಸಲ್ಲಿಸಿದ ಒಕ್ಕೂಟದ ಪತ್ರದಲ್ಲಿ ಸೇರಿಸಲಾಗಿದೆ. **ಆದಾಗ್ಯೂ, ಮೇಲೆ ಹೇಳಿದಂತೆ, ಈ ಅಭ್ಯಾಸವು ಕಾರ್ಮಿಕರ ಪ್ರಕಾರ, ಸೆಪ್ಟೆಂಬರ್ 2019 ರವರೆಗೆ ನಡೆಯುತ್ತಿತ್ತು.**

ಈ ಅಭ್ಯಾಸವು ಕಾನೂನಿನ ವಿರುದ್ಧವಾಗಿತ್ತು (ಕಾರ್ಖಾನೆಗಳ ಕಾಯಿದೆ, ಕರ್ನಾಟಕ ರಾಜ್ಯ ಕಾರ್ಖಾನೆಗಳ ನಿಯಮಗಳು ಮತ್ತು ವೇತನ ಪಾವತಿ ಕಾಯಿದೆ) ಮತ್ತು ಕಂಪನಿಯ ಸ್ವಂತ ಕೆಲಸದ ಸಮಯ ಮತ್ತು ಸಂಬಳದ ನೀತಿಗಳ ವಿರುದ್ಧವೂ ಆಗಿತ್ತು. ಕಂಪನಿ ನೀತಿ ಹೇಳುವುದೇನೆಂದರೆ: "ಕಾನೂನಿನ ಪ್ರಕಾರ ಕಾರ್ಮಿಕರಿಗೆ ಓವರ್ಟೈಮ್ಗಾಗಿ ಪರಿಹಾರ ನೀಡಲಾಗುತ್ತದೆ: ಯಾವುದೇ ಓವರ್ಟೈಮ್ ಕೆಲಸ ಸಂಬಂಧಿತ ಮ್ಯಾನೇಜರ್‌ನಿಂದ ಅಧಿಕೃತಗೊಳಿಸಲ್ಪಡಬೇಕು ಮತ್ತು ಡಬಲ್ ವೇತನವನ್ನು ಪಾವತಿಸಲಾಗುವುದು. ಯಾವಾಗ ಓವರ್ಟೈಮ್ ನಿರ್ವಹಿಸಬೇಕಾಗುತ್ತದೆಯೋ, ಅದು ನೌಕರರ ಒಪ್ಪಿಗೆಯೊಂದಿಗೆ ಮಾತ್ರ ಮತ್ತು ಯಾರನ್ನೂ ಬಲವಂತವಾಗಿ ಓವರ್ಟೈಮ್ ಮಾಡಿಸಲಾಗದು. ಓವರ್ಟೈಮ್ ನಿರಾಕರಿಸುವ ಹಕ್ಕನ್ನು ನೌಕರರು ಪಡೆದುಕೊಂಡಿದ್ದಾರೆ ಅದು ಅವರ ವಿವೇಚನೆಗೆ ಬಿಟ್ಟದ್ದು".

ಕಾನೂನುಬದ್ಧ ಓವರ್ಟೈಮ್ ವೇತನವನ್ನು ನಿರಾಕರಿಸುವುದರ ಹೊರತಾಗಿ, ಇಂತಹ ದಾಖಲಾಗದ ಮತ್ತು ಲೆಕ್ಕವಿಲ್ಲದ ಓವರ್ಟೈಮ್ ಸಹ ಕಾರ್ಮಿಕರ ಆರೋಗ್ಯ ಮತ್ತು ಸುರಕ್ಷತೆಗೆ ಅಪಾಯವನ್ನುಂಟುಮಾಡುತ್ತದೆ, ಈ ಕಾಳಜಿಯನ್ನು ಸಹ ಕಾರ್ಮಿಕರಿಂದ ಹಂಚಿಕೊಳ್ಳಲಾಗಿದೆ. ಇದರಿಂದಾಗಿ ಈ ಅವಧಿಯಲ್ಲಿ ಕೆಲಸಗಾರರೊಂದಿಗೆ ಯಾವುದೇ ಅಪಘಾತ ಸಂಭವಿಸಿದಲ್ಲಿ, ಅವರ ಕೆಲಸದ ಸ್ಥಳದಲ್ಲಿ ಅದೇ ರೀತಿ ಸಂಭವಿಸಿದೆ ಎಂದು ತೋರಿಸಲು ಯಾವುದೇ ದಾಖಲೆಗಳಿಲ್ಲ, ಅವರು ಅಧಿಕೃತವಾಗಿ ಕೆಲಸದ ಸಮಯದಿಂದ ಪಂಚ್ ಔಟ್ ಮಾಡಿರುವುದರಿಂದ, ಅವರು ESI ಅಥವಾ ಯಾವುದೇ ಇತರ ಸರ್ಕಾರಿ/ ಕಾರ್ಖಾನೆ ವೈದ್ಯಕೀಯ ಪ್ರಯೋಜನಗಳನ್ನು ಅಥವಾ ಪರಿಹಾರವನ್ನು ಪಡೆಯಲು ಸಾಧ್ಯವಿಲ್ಲ .

ಮೇಲಿನ ಆರೋಪವನ್ನು ಕೇವಲ ಆಫ್‌ಸೈಟ್ ಕಾರ್ಮಿಕರು ಹಂಚಿಕೊಂಡಿದ್ದಾರೆ ಹೊರತು ಯಾವುದೇ ಆನ್‌ಸೈಟ್ ಕಾರ್ಮಿಕರಲ್ಲ.

► **ಕಾನೂನು ಉಲ್ಲೇಖಗಳು:**

1. ಕಾರ್ಖಾನೆಗಳ ಕಾಯ್ದೆ 1948: ಸೆಕ್ಷನ್ 51 and 59: Factories_Act_1948.pdf (labour.gov.in)
2. ಕರ್ನಾಟಕ ಕಾರ್ಖಾನೆ ನಿಯಮಗಳು 1969: ಅಧ್ಯಾಯ 6, ಸೆಕ್ಷನ್ 109: Karnataka Factories Rules, 1969.pdf (complianceuncovered.com)
3. ಕನಿಷ್ಠ ವೇತನ ಕಾಯ್ದೆ 1948: ಸೆಕ್ಷನ್ 14: Minimum Wages Act, 1948 (clc.gov.in)

► **ಪರಿಸಮಾಪ್ತಿ/ತೀರ್ಮಾನ:** ಮಾಸಿಕ ಓವರ್ಟೈಮ್ 150-200 ಗಂಟೆಗಳನ್ನು ತಲುಪಿದ ಆರೋಪವು ನಿಜವಲ್ಲವೆಂದು ಕಂಡುಬಂದಿದೆ: ಎಲ್ಲಾ ಮಾಹಿತಿಯ ಮೂಲಗಳಿಂದಲೂ ಇದು ದೃಢೀಕರಿಸಲ್ಪಟ್ಟಿದೆ. ಹೀಗಾಗಿ ಇದನ್ನು ಕಾರ್ಖಾನೆಯಲ್ಲಿ ಪರಿಪಾಲನೆ ಮಾಡಲ್ಲೇ ಇಲ್ಲ. ಆದಾಗ್ಯೂ, ಆಫ್‌ಸೈಟ್ ಚರ್ಚೆಯ ಸಮಯದಲ್ಲಿ ಹೆಚ್ಚಿನ ಸಂಖ್ಯೆಯ ಕಾರ್ಮಿಕರ ಏಕರೂಪದ ವರ್ಣನ್ನಳಿಂದ (30 ಕ್ಕಿಂತ ಹೆಚ್ಚು), ಸಾಂದರ್ಭಿಕವಾಗಿ ದಾಖಲಾಗದ/ಲೆಕ್ಕವಿಲ್ಲದ ಮತ್ತು ಕೆಲವು ಗಂಟೆಗಳ ಕಾಲ ಡಿಫೆಕ್ಟಿವ್ ಪೀಸ್ ಗಳನ್ನು ಸರಿಪಡಿಸಲು ಕಾರ್ಮಿಕರಿಗೆ ಓವರ್ಟೈಮ್ ವೇತನವನ್ನು ನೀಡದಿರುವುದು ಸತ್ಯವೆಂದು ತನಿಖಾ ತಂಡವು ತೀರ್ಮಾನಿಸಿದೆ.

ಶಿಫಾರಸ್ಸುಗಳು:

ಎಲ್ಲಾ ಓವರ್ಟೈಮ್ ಕೆಲಸವನ್ನು ದಾಖಲಿಸಬೇಕು ಮತ್ತು ಕಾನೂನು ನಿಯಮಗಳ ಪ್ರಕಾರ ವೇತನ ಪಾವತಿಸಬೇಕು.

